ಸಂಪುಟ 01 | ಸಂಚಿಕೆ 160 ಶುಕ್ರವಾರ 14 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ವಿಭಜನೆಯ ಭೀಕರತೆ ಸ್ಮರಣಾ ದಿನ (Partition Horrors Remembrance Day)
ಭಾರತ ವಿಭಜನೆಯ ಸಂದರ್ಭದಲ್ಲಿ ಸಂಭವಿಸಿದ ನೋವು, ಸಂಕಷ್ಟ ಮತ್ತು ಬಲಿದಾನಗಳನ್ನು ಸ್ಮರಿಸುವ ದಿನ.

2)ರಾಷ್ಟ್ರೀಯ ಹಣಕಾಸು ಜಾಗೃತಿ ದಿನ
ಉಳಿತಾಯ, ಬಜೆಟ್ ಮತ್ತು ಹಣಕಾಸಿನ ಯೋಜನೆಯ ಬಗ್ಗೆ ಜಾಗೃತಿ ಮೂಡಿಸುವ ದಿನ.

3) ವಿಶ್ವ ಹಲ್ಲಿ ದಿನ (World Lizard Day)
ಹಲ್ಲಿಗಳು ಮತ್ತು ಪರಿಸರ ವ್ಯವಸ್ಥೆಯಲ್ಲಿ ಅವುಗಳ ಮಹತ್ವದ ಬಗ್ಗೆ ಅರಿವು ಮೂಡಿಸುವ ದಿನ.

## ಸುಭಾಷಿತ

ಪ್ರತಿಸ್ಪರ್ಧಿಗಳಿಂದ ಆಗುವ ಪರಾ-
ಜಯ ನಿಜವಾದ ಸೋಲಲ್ಲ; ನಮ್ಮಲ್ಲಿ,
ನಮ್ಮ ಶ್ರದ್ಧೆಯಲ್ಲಿ ನಮಗೆ ನಂಬಿಕೆ
ಹೋಗುವುದು ನಿಜವಾದ ಸೋಲು.

-ತ. ರಾ. ಸು

## ಲಿಂಗಸಗೂರು ವಕೀಲರ ಸಂಘದ ಅಧ್ಯಕ್ಷರಾಗಿ ಭೂಪನಗೌಡ ಕರಡಕಲ್ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಲಿಂಗಸಗೂರು ವಕೀಲರ ಸಂಘದ 2026?27ನೇ ಸಾಲಿನ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಭೂಪನಗೌಡ ಕರಡಕಲ್ ಅವರು ಆಯ್ಕೆಯಾಗಿದ್ದಾರೆ. ಅವರ ಆಯ್ಕೆಯಿಂದ ಸಂಘದ ಸದಸ್ಯರಲ್ಲಿ ಹೊಸ ಉತ್ಸಾಹ ಮೂಡಿದ್ದು, ವಕೀಲರ ಹಿತಾಸಕ್ತಿ ಹಾಗೂ ಸಂಘದ ಅಭಿವೃದ್ಧಿಗೆ ಹೊಸ ದಿಕ್ಕು ದೊರೆಯುವ ನಿರೀಕ್ಷೆ ವ್ಯಕ್ತವಾಗಿದೆ.**

ವಕೀಲರ ವೃತ್ತಿಪರ ಸಮಸ್ಯೆಗಳು, ಮೂಲಭೂತ ಸೌಕರ್ಯಗಳ ಕೊರತೆ, ನ್ಯಾಯಾಲಯಕ್ಕೆ ಸಂಬಂಧಿಸಿದ ಹಲವು ವಿಚಾರಗಳು ಹಾಗೂ ವಕೀಲರ ಹಕ್ಕು ಮತ್ತು ಹಿತಾಸಕ್ತಿಗಳ ರಕ್ಷಣೆಯನ್ನು ಪ್ರಮುಖವಾಗಿ ಪರಿಗಣಿಸಿ ಭೂಪನಗೌಡ ಕರಡಕಲ್ ಅವರು ತಮ್ಮ ಆದ್ಯತೆಗಳನ್ನು ಮುಂದಿಟ್ಟುಕೊಂಡಿದ್ದಾರೆ.

ವಕೀಲರಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ವಕೀಲರ ಸಂಘದ ಕಟ್ಟಡ, ಕಚೇರಿ, ಗ್ರಂಥ-ಾಲಯ, ಕುಡಿಯುವ ನೀರು, ಶೌಚಾಲಯ, ಕುಳಿತುಕೊಳ್ಳುವ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ.

ವಕೀಲರಿಗೆ ಉತ್ತಮ ವೃತ್ತಿಪರ ವಾತಾವರಣ ಕಲ್ಪಿಸುವುದು ಹಾಗೂ ಸಂಘದ ಕಾರ್ಯಚಟುವಟಿಕೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಆದ್ಯತೆಯೊಂದಿಗೆ ಕಾರ್ಯನಿರ್ವಹಿಸುವುದಾಗಿ ಅವರು ಹೇಳಿದ್ದಾರೆ.

ವಕೀಲರ ಹಕ್ಕು ಮತ್ತು ಹಿತಾಸಕ್ತಿಗಳ ರಕ್ಷಣೆ

ವಕೀಲರ ವೃತ್ತಿಪರ ಹಕ್ಕುಗಳು ಮತ್ತು ಹಿತಾಸಕ್ತಿಗಳ ರಕ್ಷಣೆಗೆ ಸದಾ ಬದ್ಧರಾಗಿರುವುದಾಗಿ ತಿಳಿಸಿರುವ ಅವರು, ವಕೀಲರು ಎದು-ರಿಸುವ ಯಾವುದೇ ಸಮಸ್ಯೆಗೆ ಸಂಘದ ಮೂಲಕ ಸೂಕ್ತವಾಗಿ ಸ್ಪಂದಿಸುವ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವುದಾಗಿ ಹೇಳಿದ್ದಾರೆ. ವಕೀಲರ ವೃತ್ತಿಗೆ ಸಂಬಂಧಿಸಿದ ಸಮಸ್ಯೆಗಳನ್ನು



ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು, ಕಾನೂನುಬದ್ಧವಾಗಿ ಹಾಗೂ ಸಂಘಟಿ-ತ ರೀತಿಯಲ್ಲಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದ್ದಾರೆ.

ಸಂಘದ ಸಮಗ್ರ ಅಭಿವೃದ್ಧಿಗೆ ಆದ್ಯತೆ


ಲಿಂಗಸಗೂರು ವಕೀಲರ ಸಂಘವನ್ನು ಇನ್ನಷ್ಟು ಸಂಘಟಿತ, ಬಲಿಷ್ಠ ಮತ್ತು ಮಾದರಿ ಸಂಘವನ್ನಾಗಿ ರೂಪಿಸುವುದು ತಮ್ಮ ಪ್ರಮುಖ ಉದ್ದೇಶವಾಗಿದೆ ಎಂದು ಭೂಪನಗೌಡ ಕರಡಕಲ್ ಹೇಳಿದ್ದಾರೆ. ಎಲ್ಲಾ ವಕೀಲರನ್ನು ಒಗ್ಗೂಡಿಸಿಕೊಂಡು, ಹಿರಿಯ ವಕೀಲರ ಮಾರ್ಗದರ್ಶನ ಹಾಗೂ ಕಿರಿಯ ವಕೀಲರ ಉತ್ಸಾಹವನ್ನು ಸಮನ್ವಯಗೊಳಿಸಿ ಸಂಘದ ಅಭಿವೃದ್ಧಿಗೆ ಶ್ರಮಿಸಲಾಗುವುದು. ಸಂಘದ ಪ್ರತಿಯೊಬ್ಬ ಸದಸ್ಯರ ಅಭಿಪ್ರಾಯ ಮತ್ತು ಸಲಹೆಗಳಿಗೆ ಗೌರವ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಕಿರಿಯ ವಕೀಲರಿಗೆ ಉತ್ತೇಜನ

ಕಿರಿಯ ವಕೀಲರಿಗೆ ವೃತ್ತಿಪರವಾಗಿ ಬೆಳೆಯಲು ಅಗತ್ಯ ಮಾರ್ಗದರ್ಶನ, ಕಾನೂನು ಜ್ಞಾನ ವೃದ್ಧಿ ಹಾಗೂ ವೃತ್ತಿಪರ ಅವಕಾಶಗಳ ಕುರಿತು ಚರ್ಚೆ ಮತ್ತು ಕಾರ್ಯಕ್ರಮಗಳನ್ನು ಆಯೋಜಿಸಲು ಆದ್ಯತೆ ನೀಡುವ ಉದ್ದೇಶ ಹೊಂದಲಾಗಿದೆ. ಕಾನೂನು ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಹಾಗೂ ಬದಲಾಗುತ್ತಿರುವ ನ್ಯಾಯಾಂಗ ವ್ಯವಸ್ಥೆಗೆ ಅನುಗುಣವಾಗಿ ವಕೀಲರು ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಲು ಅಗತ್ಯ ಸಹಕಾರ ನೀಡಲಾಗುವುದು ಎಂದು ಹೇಳಿದ್ದಾರೆ.

ಸಮಸ್ಯೆಗಳಿಗೆ ತ್ವರಿತ ಸ್ಪಂದನೆ

ವಕೀಲರು ಎದುರಿಸುತ್ತಿರುವ ಸಮಸ್ಯೆಗಳಿಗೆ ತ್ವ-ರಿತವಾಗಿ ಸ್ಪಂದಿಸುವ ಶಕ್ತಿಯುತ ನಾಯಕತ್ವ ನೀಡುವುದು ತಮ್ಮ ಜವಾಬ್ದಾರಿಯಾಗಿದೆ ಎಂದು ಭೂಪನಗೌಡ ಕರಡಕಲ್ ತಿಳಿಸಿದ್ದಾರೆ. ಕಾಯಂ ಸೆಷನ್ಸ್ ನ್ಯಾಯಾಲಯ ಸ್ಥಾಪನೆಗೆ ಒತ್ತು ಲಿಂಗಸಗೂರು ಭಾಗದ ವಕೀಲರು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಲಿಂಗಸಗೂರಿನಲ್ಲಿ ಕಾಯಂ ಸೆಷನ್ಸ್ ನ್ಯಾಯಾಲಯ ಸ್ಥಾಪನೆಗೆ ಪ್ರಾಮಾಣಿಕ ಪ್ರಯತ್ನ ನಡೆಸುವುದು ತಮ್ಮ ಪ್ರಮುಖ ಆದ್ಯತೆಯಾಗಿದೆ ಎಂದು ಭೂಪನಗೌಡ ಕರಡಕಲ್ ತಿಳಿಸಿದ್ದಾರೆ. ಕಾಯಂ ಸೆಷನ್ಸ್ ನ್ಯಾಯಾಲಯ ಸ್ಥಾಪನೆಯಿಂದ ನ್ಯಾಯಾಂಗ ಸೇವೆಗಳು ಮತ್ತಷ್ಟು ಸುಲಭವಾಗಿ



ದೊರೆಯುವುದರ ಜೊತೆಗೆ, ವಕೀಲರು ಹಾಗೂ ಕಕ್ಷಿದಾರರು ದೂರದ ನ್ಯಾಯಾಲಯಗಳಿಗೆ ತೆರಳಬೇಕಾದ ಅನಿವಾರ್ಯತೆ ಕಡಿಮೆಯಾಗಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ, ಹೈಕೋರ್ಟ್ ಹಾಗೂ ಸಂಬಂಧಪಟ್ಟ ನ್ಯಾಯಾಂಗ ಪ್ರಾಧಿಕಾರಗಳ ಗಮನ ಸೆಳೆದು ಅಗತ್ಯ ಕ್ರಮ ಕೈಗೊಳ್ಳಲು ನಿರಂತರ ಪ್ರಯತ್ನ ನಡೆಸುವುದಾಗಿ ಅವರು ತಿಳಿಸಿದ್ದಾರೆ.

ಸಂಘದ ಸದಸ್ಯರ ಸಮಸ್ಯೆಗಳನ್ನು ಆಲಿಸಿ, ಅವುಗಳ ಪರಿಹಾರಕ್ಕಾಗಿ ಸಂಬಂಧಪಟ್ಟ ಇಲಾಖೆಗಳು ಹಾಗೂ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ. "ವಕೀಲರ ಹಿತವೇ ಸಂಘದ ಶಕ್ತಿಸಂಘದ ಅಭಿವೃದ್ಧಿಯೇ ನಮ್ಮ ಸಂಕಲ್ಪ" ಎಂಬ ಧ್ಯೇಯದೊಂದಿಗೆ ಎಲ್ಲರ ಸಹಕಾರದೊಂದಿಗೆ ಸಂಘವನ್ನು ಮುನ್ನಡೆಸುವುದಾಗಿ ಅವರು ತಿಳಿಸಿದ್ದಾರೆ.

ಭೂಪನಗೌಡ ಕರಡಕಲ್ ಅವರ ಆಯ್ಕೆಗೆ ವಕೀಲರ ಸಂಘದ ಸದಸ್ಯರು, ಹಿರಿಯ ಹಾಗೂ ಕಿರಿಯ ವಕೀಲರು ಅಭಿನಂದನೆ ಸಲ್ಲಿಸಿದ್ದು, ಅವರ ನೇತೃತ್ವದಲ್ಲಿ ಲಿಂಗಸಗೂರು ವಕೀಲರ ಸಂಘವು ಇನ್ನಷ್ಟು ಬಲಿಷ್ಠವಾಗಿ ಬೆಳೆದು, ವಕೀಲರ ಹಿತಾಸಕ್ತಿ ಹಾಗೂ ನ್ಯಾಯಾಂಗ ಸೇವೆಯ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಲಿ ಎಂದು ಶುಭ ಹಾರೈಸಿದ್ದಾರೆ.

## ಓಲಾ, ಊಬರ್ ,ರ್ಯಾಪಿಡೋ ಕಂಪನಿಗಳಿಗೆ ಕೇಂದ್ರ ಸರ್ಕಾರ ಬ್ರೇಕ್..!

❑ ನೈಜ್ಯ ದೆಸೆ ನ್ಯೂಸ್

**ನವದೆಹಲಿ: ದೇಶದ ಪ್ರಮುಖ ಕ್ಯಾಬ್ ಅಗ್ರಿಗೇಟರ್‌ಗಳಾದ ಓಲಾ , ಊಬರ್ ಮತ್ತು ರ್ಯಾಪಿಡೋ ಕಂಪನಿಗಳಿಗೆ ಕೇಂದ್ರ ಸರ್ಕಾರವು ಮಹತ್ವದ ನಿರ್ದೇಶನ ನೀಡಿದೆ. ಆ?ಯಪ್‌ಗಳಲ್ಲಿ ಪ್ರಯಾಣಿಕರನ್ನು ತಪ್ಪುದಾ-ರಿಗೆಳೆಯುವ ಹಾಗೂ ಬಲವಂತದಂತೆ ಗೋಚರಿಸುವ ಫ್ರೀ-ರೈಡ್ ಟ್ರಿಪ್ ವೈಶಿಷ್ಟ್ಯವನ್ನು ತಕ್ಷಣವೇ ತೆಗೆದುಹಾಕುವಂತೆ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ.**




ಮೋಟಾರು ವಾಹನ ಅಗ್ರಿಗೇಟರ್ ಮಾರ್ಗಸೂಚಿಗಳು, 2025ರ ಕಟ್ಟುನಿಟ್ಟಿನ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಕಳೆದ ಕೆಲವು ತಿಂಗಳುಗಳಿಂದ ಕ್ಯಾಬ್ ಬುಕಿಂಗ್ ಮಾಡುವಾಗ ತ್ವರಿತ ಸವಾರಿ ದೃಢೀಕರಣ-ಕ್ಕಾಗಿ ಟಿಪ್ ನೀಡಿ, ಹೆಚ್ಚುವರಿ ಹಣವನ್ನಿಡಿ, ಚಾಲಕ ಬೇಗ ಬರುತ್ತಾನೆ ಎಂಬಿತ್ಯಾದಿ ಪ್ರಾಂಪ್ಟ್ ಗಳು ಗ್ರಾಹಕರನ್ನು ಕಂಗೆಡಿಸಿದ್ದವು. ಆಟೋ, ಕ್ಯಾಬ್ ಸಿಗದ ಸಂದರ್ಭದಲ್ಲಿ ಅನಿವಾರ್ಯವಾಗಿ ಹೆಚ್ಚಿನ ಹಣ ನೀಡಲು ಪ್ರಯಾಣಿಕರು ಒತ್ತಡಕ್ಕೊಳಗಾಗುತ್ತಿದ್ದರು. ಇದು ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಸ್ಪಷ್ಟ ಉಲ್ಲಂಘನೆಯಾಗಿದೆ ಎಂಬ ದೂರುಗಳು ವ್ಯಾಪಕವಾಗಿ ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ ಸರ್ಕಾರ ಮಧ್ಯಪ್ರವೇಶಿಸಿ ಈ ಹೊಸ ನಿಯಮ ಜಾರಿಗೆ ತಂದಿದೆ. ಸಮಯದ ಮಿತಿ: ಇನ್ನು ಮುಂದೆ ಟಿಪ್ಪಿಂಗ್ ವೈಶಿಷ್ಟ್ಯವು ಪ್ರಯಾಣ ಮುಗಿದ ನಂತರ ಮಾತ್ರ ಗೋಚರಿಸುತ್ತದೆ.

## ಭಾರತ್ ಜೋಡೋ ಯುವ ಸಂಘ ಸ್ಥಾಪನೆಗೆ ಯುವಕರ ಜವಾಬ್ದಾರಿಯಾಗಿದೆ ತಹಶೀಲ್ದಾರ್ : ಜೂಗಲ್ ಮಂಜುನಾಯಕ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಭಾರತ್ ಜೋಡೋ ಯುವ ಸಂಘ ಸ್ಥಾಪನೆಗೆ ಅಗತ್ಯ ಕ್ರಮದೊಂದಿಗೆ ಯುವಕರ ನೋಂದಣಿ ಕಾರ್ಯ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಹಶೀಲ್ದಾರ್ ಜೂಗಲ್ ಮಂಜುನಾಯಕ ಹೇಳಿದರು. ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಭಾರತ್ ಜೋಡೋ ಯುವ ಸಂಘ ಸ್ಥಾಪನೆ ಸಂಬಂಧ ಗುರುವಾರ ನಡೆದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ಯುವ ಜನರದಲ್ಲಿ ಕ್ರೀಡೆ, ಸಂಸ್ಕೃತಿ, ವೈಜ್ಞಾನಿಕ ಮನೋಭಾವ,**



**ಸಮುದಾಯಿಕ ಸಾಮಾಜಿಕ ಸಾಮರಸ್ಯ ಉತ್ತೇಜಿಸುವಲ್ಲಿ ಸರ್ಕಾರ ಭಾರತ್ ಜೋಡೋ ಯುವ ಸಂಘಗಳ ಸ್ಥಾಪನೆಗೆ ಮುಂದಾಗಿದೆ.**

ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು 16 ವರ್ಷ ತುಂಬಿ ಮತ್ತು 35 ವರ್ಷದೊಳಗಿನ ಯುವಕರನ್ನೊಳಗೊಂಡ ಯುವ ಸಂಘ ರಚಿಸಬೇಕು. ನಗರ ಮತ್ತು ಗ್ರಾಮೀಣ ಮಟ್ಟದಲ್ಲಿ ಯುವ ಸಂಘ ಸ್ಥಾಪನೆಗೆ ಅಗತ್ಯ ಕ್ರಮವಹಿಸಿ, ಸಂಘಗಳನ್ನು ಸ್ಥಾಪಿಸಬೇಕು ಎಂದರು. ತಾ.ಪಂ. ಇಒ ಆರ್.ಕೆ.ಶ್ರೀಕುಮಾರ ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಕಂಪ್ಲಿ ತಾಲೂಕಿನಲ್ಲಿ ಭಾರತ್ ಜೋಡೋ ಯುವ ಸಂಘಗಳನ್ನು ಸ್ಥಾಪಿಸಬೇಕಾಗಿದೆ. ಸ್ಥಳೀಯ ಸಮುದಾಯದ ಅಭಿವೃದ್ಧಿ, ಸಾಮಾಜಿಕ ಸಾಮರಸ್ಯ ಮತ್ತು ಪರಿಸರ ಸಂರಕ್ಷಣೆಯಲ್ಲಿ ಯುವಕರನ್ನು ನೇರ ಪಾಲುದಾರರನ್ನಾಗಿ ಮಾಡುವುದು.

ಹಾಗೆಯೇ ಕ್ರೀಡೆ, ಫಿಟ್ನೆಸ್, ಕೌಶಲ್ಯಾಭಿವೃದ್ಧಿ ಮೂಲಕ ಯುವ ಜನರ ಆರ್ಥಿಕ, ಸಾಮಾಜಿಕ ಸಬಲೀಕರಣ ಸಾಧಿಸುವುದು ಯೋಜನೆಯ ಉದ್ದೇಶವಾಗಿದೆ ಎಂದರು. ಭಾರತ್ ಜೋಡೋ ಯುವ ಸಂಘಗಳ ಸ್ಥಾಪನೆಗೆ ಸಂಬಂಧಿಸಿದ ಕೆಲ ವಿಷಯಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಬಿ.ಮಲ್ಲಿಕಾರ್ಜುನ, ವಿವಿಧ ಇಲಾಖೆಯ ಟಿ.ಎಂ.ಬಸವರಾಜ, ಕೆ.ವಿರುಪಾಕ್ಷಪ್ಪ, ಗಾದಿಲಿಂಗಪ್ಪ, ಮಲ್ಲಪ್ಪ, ಮಹಾಬಲೇಶ್ವರಪ್ಪ ಸೇರಿದಂತೆ ಇತರರು ಇದ್ದರು.

## ಕೊರವ ಕೊರಮ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ : ರಾಜೇಶ ಮಾಣಿಕ್

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ಶರಣ ನೂಲಿ ಚಂದಯ್ಯ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ವತಿಯಿಂದ ಇದೆ ತಿಂಗಳಲ್ಲಿ ನಡೆಯಲಿರುವ ನೂಲಿ ಚಂದಯ್ಯ ನವರ ಜಯಂತಿ ಅಂಗವಾಗಿ ಕೊರವ ಕೊರಮ ಸಮಾಜದ ವಿದ್ಯಾರ್ಥಿಗಳಿಗೆ 2026-27 ನೇ ಸಾಲಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಎಸ್ ಎಸ್ ಎಲ್ ಸಿ ಯಲ್ಲಿ ಶೇ.85 ಕ್ಕಿಂತ ಹೆಚ್ಚು ಅಂಕ ಗಳಿಸಿದ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ90 ಕಿಂತ ಹೆಚ್ಚು ಅಂಕ ಗಳಿಸಿದ ತಾಲೂಕಿನ ಅರ್ಹ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ ಸ್ವ ವಿವರಗಳೊಂದಿಗೆ ದಿನಾಂಕ 25-8-2027 ರ ಒಳಗಾಗಿ ನೂಲಿ ಚಂದಯ್ಯ ಶಿಕ್ಷಣ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ರೇಣುಕಾ ನಗರ ಹಳೇ ತಹಶೀಲ್ ಆಫೀಸ್ ರೋಡ್ ಲಿಂಗಸಗೂರು ಕಛೇರಿಯಲ್ಲಿ ತಮ್ಮ ದಾಖಲೆಗಳನ್ನು ಸಲ್ಲಿಸಬಹುದು.**



ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಡತನದಿಂದಾಗಿ ಓದು ಪೂರ್ಣ ಗೊಳಿಸಲಾಗದ ವಿದ್ಯಾರ್ಥಿನಿಯರಿಗೆ ಹಾಗೂ ವಿದ್ಯಾರ್ಥಿಗಳಿಗೆ ಈ ಒಂದು ಪ್ರತಿಭಾ ಪುರಸ್ಕಾರ ಸಹಕಾರಿಯಾಗಲಿದ್ದು ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳು ಈ ಪುರಸ್ಕಾರವನ್ನು ಸದುಪಯೋಗ ಪಡಿಸಿಕೊಳ್ಳಬಹುದು.

ಕರ್ನಾಟಕ ರಕ್ಷಣಾ ವೇದಿಕೆ{ ಶಿವರಾಮೇಗೌಡ ಬಣ } ರಾಜ್ಯ ಘಟಕ ಬೆಂಗಳೂರು,ಹಾಗೂ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ ಸಮಿತಿ ಚಾರಿಟೇಬಲ್ ಟ್ರಸ್ಟ್ ಲಿಂಗಸಗೂರು,ಮತ್ತು ದೇವದುರ್ಗ ಮಾಜಿ ಶಾಸಕರಾದ ಯಲ್ಲಪ್ಪ ಅಕ್ಕರಕಿ ಅಭಿಮಾನಿ ಬಳಗ ಲಿಂಗಸಗೂರು . ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಸಹಕಾರ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಈ ಮೊಬೈಲ್ ನಂಬರ್ 94817 82569 ಸಂಪರ್ಕಿಸಬೇಕೆಂದು ರಾಜೇಶ್ ಮಾಣಿಕ್ ತಿಳಿಸಿದ್ದಾರೆ.

## ಸಮವಸ್ತ್ರದ ಸದುಪಯೋಗದೊಂದಿಗೆ ಮಕ್ಕಳು ಶಿಕ್ಷಣವಂತರಾಗಿ : ಜೋಗತಿ ರಾಜಮ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ತಾಲೂಕಿನ ಮೆಟ್ರಿ ಗ್ರಾಪಂಯ ಚಿನ್ನಾಪುರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಜೋಗತಿ ರಾಜಮ್ಮ ಸುಗ್ಗನಹಳ್ಳಿ ಇವರು ಸ್ವಂತ ಖರ್ಚಿನಿಂದಾಗಿ ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಗುರುವಾರ ವಿತರಿಸಿದರು.**

ನಂತರ ಮುಖ್ಯಗುರು ಈ.ಜಡೆಪ್ಪ ಮಾತನಾಡಿ, ಶಾಲೆಯಲ್ಲಿ ಪ್ರಸ್ತುತವಾಗಿ 27 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಇಲ್ಲಿನ ಬಡು ಬಡತನದಲ್ಲಿ ಜೀವನ ನಡೆಸುವ ಸರ್ಕಾರಿ ಶಾಲೆಯ ಮಕ್ಕಳಿಗೆ ಜೋಗತಿ



ರಾಜಮ್ಮ ಇವರು ಉಚಿತವಾಗಿ ಸಮವಸ್ತ್ರಗಳನ್ನು ವಿತರಿಸಿದ್ದು, ಈ ಸಮವಸ್ತ್ರ ಸದುಪಯೋಗದೊಂದಿಗೆ ಮಕ್ಕಳಿಗೆ ಶಿಕ್ಷಣವಂತರಾಗಬೇಕು ಎಂದರು.

ನಂತರ ಜೋಗತಿ ರಾಜಮ್ಮ ಮಾತನಾಡಿ, ಪ್ರತಿ ವರ್ಷ ನಾನು ದುಡಿದಿರುವ ಹಣದಿಂದ ಸ್ವಲ್ಪನಾದರೂ ಶಾಲೆ ಮಕ್ಕಳಿಗೆ ದಾನ ಧರ್ಮ ಮಾಡುತ್ತೇನೆ. ಈ ಮಕ್ಕಳೇ ನನ್ನ ಮಕ್ಕಳೆಂದು ಭಾವಿಸಿದ್ದೇನೆ ಎಂದು ಹೇಳಿದರು, ಈ ಸಂದರ್ಭದಲ್ಲಿ ಎಸ್ಡಿಎಂಸಿ ಅಧ್ಯಕ್ಷರಾದ ಎಂ.ರಮೇಶ್‌ಬಾಬ, ಮುಖಂಡರಾದ ಕೆ.ಗಣೇಶ, ಮಲ್ಲಿಕಾರ್ಜುನ, ಕೊಂಡಪ್ಪ, ಪಿ.ತಾರಾಸಾಬ್, ಜಯರಾಮುಲು, ಪಿ.ರಾಜು, ಹೊನ್ನೂರ, ಅತಿಥಿ ಶಿಕ್ಷಕರಾದ ಉಮೇಶ ಮತ್ತು ಅಡುಗೆ ಸಿಬ್ಬಂದಿಗಳಾದ ರತ್ನಮ್ಮ, ಬುಡ್ಡಮ್ಮ ಮಕ್ಕಳು ಇದ್ದರು.

## ದೋಟಿಹಾಳ ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ

❑ ನೈಜ್ಯ ದೆಸೆ ನ್ಯೂಸ್

**ದೋಟಿಹಾಳ: ಇಲ್ಲಿನ ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಗ್ರಂಥಾಲಯ ವಿಜ್ಞಾನದ ಪಿತಾಮಹ ಡಾ. ಎಸ್.ಆರ್. ರಂಗನಾಥನ್ ಅವರ ಜಯಂತಿ ಹಾಗೂ ರಾಷ್ಟ್ರೀಯ ಗ್ರಂಥ-'ಪಾಲಕರ ದಿನಾಚರಣೆಯನ್ನು ಆಚರಿಸಲಾಯಿತು.**



ಈ ಸಂದರ್ಭದಲ್ಲಿ ಮಾತನಾಡಿದ ಗ್ರಂಥಾಲಯ ಮೇಲ್ವಿಚಾರಕ ಶ್ರೀಕಾಂತ್ ಕಿರಗಿ, ಡಾ. ಎಸ್.ಆರ್. ರಂಗನಾಥನ್ ಅವರು ಭಾರತದ ಗ್ರಂಥಾಲಯ ವಿಜ್ಞಾನದ ಪಿತಾಮಹರೆಂದು ಪ್ರಸಿದ್ಧರಾಗಿದ್ದಾರೆ. 1892ರ ಆಗಸ್ಟ್ 12ರಂದು ತಮಿಳುನಾಡಿನ ಶಿಯಾಳಿಯಲ್ಲಿ ಜನಿಸಿದ ಅವರು, ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿ ನಂತರ ಗ್ರಂಥಾಲಯ ವಿಜ್ಞಾನ ಕ್ಷೇತ್ರಕ್ಕೆ ಪ್ರವೇಶಿಸಿದರು ಎಂದರು. ಭಾರತದಲ್ಲಿ ಆಧುನಿಕ ಗ್ರಂಥಾಲಯ ವ್ಯವಸ್ಥೆಯ ಅಭಿವೃದ್ಧಿಗೆ ಅವರು ಮಹತ್ವದ ಕೊಡುಗೆ ನೀಡಿದ್ದು, 'ಗ್ರಂಥಾಲಯದ ಐದು ನಿಯಮಗಳನ್ನು' ರೂಪಿಸಿದರು. ಅಲ್ಲದೆ 'ಕೋಲನ್ ವರ್ಗೀಕರಣ ಪದ್ಧತಿ'ಯನ್ನು ಅಭಿವೃದ್ಧಿಪಡಿಸಿದರು.

ಗ್ರಂಥಾಲಯಗಳು ಎಲ್ಲರಿಗೂ ಮುಕ್ತವಾಗಿದ್ದು, ಜ್ಞಾನವನ್ನು ಪ್ರತಿಯೊಬ್ಬರಿಗೂ ತಲುಪಿಸಬೇಕು ಎಂಬ ಆಶಯವನ್ನು ಬಲವಾಗಿ ಪ್ರತಿಪಾದಿಸಿದ್ದರು ಎಂದು ತಿಳಿಸಿದರು. ಡಾ. ಎಸ್.ಆರ್. ರಂಗನಾಥನ್ ಅವರ ಜನ್ಮದಿನವಾದ ಆಗಸ್ಟ್ 12ರಂದು ರಾಷ್ಟ್ರೀಯ ಗ್ರಂಥಪಾಲಕರ ದಿನವನ್ನು ಆಚರಿಸಲಾಗುತ್ತದೆ. ಅವರ ಸೇವೆ ಮತ್ತು ಕೊಡುಗೆಗಳು ಭಾರತದ ಗ್ರಂಥಾಲಯ ಕ್ಷೇತ್ರಕ್ಕೆ ಶಾಶ್ವತ ದಾರಿದೀಪವಾಗಿವೆ ಎಂದರು. ಈ ಸಂದರ್ಭದಲ್ಲಿ ಕೇಸೂರು ಗ್ರಂಥಾಲಯ ಮೇಲ್ವಿಚಾರಕಿ ಬಸಮ್ಮ ತಳವಾರ, ಪ್ರೇರಕಿ ಶ್ವೇತಾ ಕಾಳಗಿ, ಶ್ರೀನಿವಾಸ್ ಕಂಠೀಲಿ, ಈಶಪ್ಪ ಹುಬ್ಬಳ್ಳಿ, ತಿಪ್ಪಣ್ಣ ಲಾಳಿ, ಗುಂಡನಗೌಡ, ನಾರಾಯಣಪ್ಪ ಕೊಳ್ಳಿ, ಬಾಲಕೃಷ್ಣ ಪತ್ತಾರ್ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## ಕುಷ್ಟಗಿಯಲ್ಲಿ ಸಾವಿತ್ರಿಬಾಯಿ ಫುಲೆ ವೃತ್ತ, ಹೊಸ ಗುರುಭವನಕ್ಕೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ (ರಿ.) ಧಾರವಾಡ ತಾಲೂಕು ಕುಷ್ಟಗಿ ವತಿಯಿಂದ ವಿವಿಧ ಬೇಡಿಕೆಗಳ ಈಡೇ-ರಿಕೆಗೆ ಆಗ್ರಹಿಸಿ ಶಾಸಕ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರಾದ ದೊಡ್ಡನಗೌಡ ಎಚ್. ಪಾಟೀಲ ಅವರಿಗೆ ಮನವಿ ಸಲ್ಲಿಸಲಾಯಿತು.**

ಕುಷ್ಟಗಿ ಪಟ್ಟಣದ ಪ್ರಮುಖ ರಸ್ತೆ ವೃತ್ತವೊಂದಕ್ಕೆ 'ಅಕ್ಷರದವ್ವ ಮಾತೆ ಸಾವಿತ್ರಿಬಾಯಿ ಫುಲೆ ವೃತ್ತ' ಎಂದು ನಾಮಕರಣ ಮಾಡಿ, ಸಾವಿತ್ರಿಬಾಯಿ ಫುಲೆ ಅವರ ಪುತ್ಥಳಿ ಸ್ಥಾಪಿಸಬೇಕು ಎಂದು ಸಂಘದ ಪದಾಧಿಕಾರಿಗಳು ಮನವಿ ಮಾಡಿದರು. ಪಟ್ಟಣದಲ್ಲಿರುವ ಗುರುಭವನದಲ್ಲಿ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ಹಾಗೂ ಕುಡಿಯುವ ನೀರಿನ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ಗುರುಭವನದಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳು ಹಾಗೂ ಸಮಾರಂಭಗಳು ನಡೆಯುತ್ತಿದ್ದು, ಕಟ್ಟಡವು ಬಹಳ ಹಳೆಯದಾಗಿದೆ.

ಕಟ್ಟಡದ ಒಳಭಾಗದಲ್ಲಿ ಹಲವು ಬಿರುಕುಗಳು ಕಾಣಿಸಿಕೊಂಡಿದ್ದು,



ಅಪಾಯದ ಸ್ಥಿತಿಯಲ್ಲಿದೆ. ಆದ್ದರಿಂದ ಅದೇ ಸ್ಥಳದಲ್ಲಿ ಸುಸಜ್ಜಿತ ಹೊಸ ಗುರುಭವನ ನಿರ್ಮಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಂಘದ ಗೌರವ ಸಲಹೆಗಾರರಾದ ಶ್ರೀಮತಿ ಜಯದೇವಿ ಉಪ್ಪಿನ್, ಅಧ್ಯಕ್ಷೆ ಶ್ರೀಮತಿ ಮಲ್ಲಮ್ಮ ತಮ್ಮಣ್ಣವರ, ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಶಿಕಲಾ ಪಾಟೀಲ, ಗೌರವಾಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಹಿರೇಮಠ, ಉಪಾಧ್ಯಕ್ಷೆ ಶ್ರೀಮತಿ ಗಿರಿಜಾ ದೇಸಾಯಿ, ಸಂಘಟನಾ ಕಾರ್ಯದರ್ಶಿ ಶ್ರೀಮತಿ ಪ್ರಭಾ ಬಳಗಿ, ಶ್ರೀಮತಿ ಉಮಾ ಬಡಿಗೇರ ಸೇ-ರಿದಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕದ ಅಧ್ಯಕ್ಷ ಬೀರಪ್ಪ ಕುರಿ, ಗೌರವಾಧ್ಯಕ್ಷ ನಿಂಗಪ್ಪ ಗುನ್ನಾಳ, ಪ್ರಧಾನ ಕಾರ್ಯದರ್ಶಿ ಶಿವಪ್ಪ ರುದ್ರೇಶ್ ಬೂದಿಹಾಳ, ಶರಣಪ್ಪ ತಿಮ್ಮನಾಳ, ಚಂದ್ರಪ್ಪ ನಿಡುಗುಂದಿ, ಅಯ್ಯಪ್ಪ ಸುರುಳ, ಯಮನೂರಪ್ಪ, ಮಲ್ಲಿಕಾರ್ಜುನ ಲಕ್ಕಲಕಟ್ಟಿ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನೀಲಪ್ಪ, ರಮೇಶ್ ಚೌವಾಣ್, ವಿಜಯಕುಮಾರ, ಮಂಜುನಾಥ ಸೇರಿದಂತೆ ಮುಖ್ಯಗುರುಗಳು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ಹಸಿರಿನ ಹೊನಲು

ಹಸಿರಿನ ಹೊನಲು ಭುವಿಯ ತುಂಬಾ,
ಹೊಸತನ ಮೂಡಿದೆ ಪ್ರಕೃತಿಯ ಮಡಿಲಾ.
ಎಲೆಗಳ ನಡುವೆ ಗಾಳಿಯ ನಾದ,
ಮನದಲಿ ಮೂಡಿಸುತಿದೆ ಸಂತಸದ ಹಾಡು.

ಬೆಟ್ಟಗಳ ಮೇಲೆ ಹಸಿರು ಹೊದಿಕೆ,
ನದಿಯ ದಡದಲ್ಲಿ ಹೂಗಳ ಸಡಗರಿಕೆ.
ಹಕ್ಕಿಗಳ ಕಲರವ ಮುಂಜಾನೆ ಕೇಳಿ,
ಪ್ರಕೃತಿಯ ಸೊಬಗಿಗೆ ಮನಸೋತು ನಿಲ್ಲಿ.

ಮರಗಳ ನೆರಳು ತಂಪನ್ನು ನೀಡಲಿ,
ಹೂಗಳ ಪರಿಮಳ ಮನವನ್ನು ತುಂಬಲಿ.
ಮಳೆಹನಿಯ ಮುತ್ತು ಭೂಮಿಗೆ ಬೀಳಲಿ,
ಬರಿದಾದ ನೆಲವೂ ಹಸಿರಾಗಿ ನಗಲಿ.

ಒಂದು ಮರ ನೆಟ್ಟರೆ ನೂರು ಕನಸು,
ಹಸಿರು ಬೆಳೆಸಿದರೆ ಸುಂದರ ಬದುಕು.
ಭೂಮಿಯ ತಾಯಿಗೆ ಗೌರವ ಸಲ್ಲಿಸಿ,
ಪ್ರಕೃತಿಯ ಮಡಿಲನು ಪ್ರೀತಿಯಿಂದ
ಕಾಪಾಡೋಣ.

ಹಸಿರೇ ನಮ್ಮ ಉಸಿರು, ಹಸಿರೇ ನಮ್ಮ ಜೀವ,
ಹಸಿರಿನಿಂದಲೇ ಬದುಕು ಸದಾ ಸೊಗಸು.
ಹಸಿರಿನ ಹೊನಲು ಎಲ್ಲೆಡೆ ಹರಡಲಿ,
ನಮ್ಮ ನಾಡು ಸದಾ ಹಸನಾಗಿ ನಗಲಿ!

## ನಮ್ಮ ತಂದೆ ತಾಯಿಯವರ ಹೆಸರಿನಲ್ಲಿ ಪ್ರತಿಭಾ ಪುರಸ್ಕಾರ

❏ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣ ಸಮೀಪದ ವಟಗಲ್ ಗ್ರಾಮದ ಮಾಲಿ ಪಾಟೀಲ್ ಕುಟುಂಬದ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಸಹ ಪ್ರತಿಭಾನ್ವಿತ ಮಕ್ಕಲೀಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ನಿವೃತ್ತ ಶಿಕ್ಷಕ ವೆಂಕನಗೌಡ ಮಾಲಿ ಪಾಟೀಲ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**



'ನಮ್ಮ ತಂದೆ ತಾಯಿಯವರಾದ ಶ್ರೀಮತಿ ಅಮರಮ್ಮ ಹಾಗೂ ಶ್ರೀ ರಾಮನಗೌಡ ಮಾಲಿ ಪಾಟೀಲ್ ಅವರ ಸ್ಮರಣಾರ್ಥ ಏಳನೇ ತರಗತಿ, ಹತ್ತನೇ ತರಗತಿ ಹಾಗೂ ದ್ವಿತಿಯ ಪಿಯುಸಿ ಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕವನ್ನು ಪಡೆದಿರುವ ಸ್ವ ಗ್ರಾಮದ ಪ್ರತಿಭಾನ್ವಿತ ಮಕ್ಕಳಿಗೆ ತಲಾ ಒಂದು ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿ ಪತ್ರ ಶಾಲು ಹಾಕಿ ಗೌರವಿಸುತ್ತಾ ಬಂದಿದ್ದು ಇದರಿಂದ ಮಕ್ಕಳಿಗೆ ನಾನೂ ಕೂಡಾ ಚೆನ್ನಗಿ ಓದುವ ಮೂಲಕ ಇಂತಹ ಪ್ರತಿಭಾ ಪುರಸ್ಕಾರ ಪಡೆಯಟಬೇಕು ಎನ್ನು ಸ್ಪರ್ಧಾ ಮನೋಭಾವನೆ ಹೆಚ್ಚಾಗಬೇಕು ಮತ್ತು ನಮ್ಮ ಗ್ರಾಮದ ಕೀರ್ತಿಯನ್ನು ರಾಜ್ಯ, ದೇಶಕ್ಕೆ ಪಸರಿಸಲಿ ಎನ್ನುವುದು ನನ್ನ ಭಾವನೆಯಿಂದ ಪ್ರತಿ ವರ್ಷ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಮತ್ತು ಉಳಿದ ಮಕ್ಕಳು ಕೂಡ ಅದೇ ರೀತಿ ಚೆನ್ನಾಗಿ ಅಬ್ಯಾಸ ಮಾಡುತ್ತಿದ್ದಾರೆ ಎಂಬುದು ಸಂತಸದ ಸಂಗತಿ' ಎಂದರು ಈ ವರ್ಷ ನಮ್ಮ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗೌರಮ್ಮ ಅಮರೇಶ, ಎಸ್ಎಸ್ಎಲ್ಸಿಯಲ್ಲಿ ಸಾಕ್ಷಿ ಆದನಗೌಡ, ದ್ವಿತಿಯ ಪಿಯುಸಿಯ ನೀಲಮ್ಮ ತಿಮ್ಮಣ್ಣ ಇವರಿಗೆ ಆಗಸ್ಟ್ 15 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವತಗಲ್‌ನಲ್ಲಿ ನಡೆಯುವ ದ್ವಜಾರೋಹಣ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಬಿಚ್ಚಾಲಿ ಗ್ರಾಮ ಪಂಚಾಯಿತಿ ಮೀಸಲಾತಿ ಅವೈಜ್ಞಾನಿಕ: ಕಾನೂನು ಹೋರಾಟದ ಎಚ್ಚರಿಕೆ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ಗಿಲ್ಲೇಸೂಗೂರು ಹೋಬಳಿಯ ಬಿಚ್ಚಾಲಿ ಗ್ರಾಮ ಪಂಚಾಯಿತಿಯ ಸದಸ್ಯ ಸ್ಥಾನಗಳಿಗೆ ಇತ್ತೀಚೆಗೆ ನಿಗದಿಪಡಿಸಿರುವ ಮೀಸಲಾತಿ ಅವೈಜ್ಞಾನಿಕ ಹಾಗೂ ಕಾನೂನುಬಾಹಿರವಾಗಿದೆ ಎಂದು ಆರೋಪಿಸಿ ಗ್ರಾಮಸ್ಥರು ರಾಯಚೂರು ಜಿಲ್ಲಾಧಿಕಾರಿಗಳು ಸೇ-ರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆಕ್ಷೇಪಣಾ ಮನವಿ ಸಲ್ಲಿಸಿದ್ದಾರೆ.**

**ಕರ್ನಾಟಕ ರಾಜ್ಯ ಪತ್ರ ಹಾಗೂ ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿ ಆದೇಶದಂತೆ ಬಿಚ್ಚಾಲಿ ಗ್ರಾಮ ಪಂಚಾಯಿತಿಯ 5 ಬ್ಲಾಕ್‌ಗಳ ಒಟ್ಟು 17 ಸದಸ್ಯ ಸ್ಥಾನಗಳಿಗೆ ಹೊಸದಾಗಿ ಮೀಸಲಾತಿ ಪ್ರಕಟಿಸಲಾಗಿದೆ. ಆದರೆ, ಮೀಸಲಾತಿ ನಿಗದಿಯಲ್ಲಿ ರೋಸ್ಟರ್ ನಿಯಮಗಳನ್ನು ಸಮರ್ಪಕವಾಗಿ ಪಾಲಿಸಲಾಗಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.**




**ಬ್ಲಾಕ್ ನಂ. 2 ವಾಲ್ಮೀಕಿ ನಗರ: ಈ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡದ (ST) ಜನಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದ್ದರೂ, ಜನಸಂಖ್ಯೆಗೆ ಅನುಗುಣವಾಗಿ ಸೂಕ್ತ ಮೀಸಲಾತಿ ಕಲ್ಪಿಸಲಾಗಿಲ್ಲ ಎಂದು ಆಕ್ಷೇಪಿಸಲಾಗಿದೆ. ಬ್ಲಾಕ್ ನಂ. 4 ಯದ್ಲಾಪೂರು: ಇಲ್ಲಿ ಪರಿಶಿಷ್ಟ ಜಾತಿಯ (SC) ಜನಸಂಖ್ಯೆ ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಅದಕ್ಕೆ ಅನುಗುಣವಾಗಿ ಮೀಸಲಾತಿ ನೀಡದೆ ಅನ್ಯಾಯ ಮಾಡಲಾಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.**

**ಕಾನೂನು ಹೋರಾಟದ ಎಚ್ಚರಿಕೆ ಬ್ಲಾಕ್ ನಂ. 2 ಮತ್ತು 4ರ ಪ್ರಸ್ತುತ ಮೀಸಲಾತಿಯನ್ನು ತಕ್ಷಣ ರದ್ದುಗೊಳಿಸಿ, ಜನಸಂಖ್ಯೆ ಹಾಗೂ ಅನ್ವಯವಾಗುವ ಕಾನೂನು ಮತ್ತು ರೋಸ್ಟರ್ ನಿಯಮಗಳ ಆಧಾರದ ಮೇಲೆ ವೈಜ್ಞಾನಿಕವಾಗಿ ಮರುಮೀಸಲಾತಿ ನಿಗದಿಪಡಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.**


**ಆಕ್ಷೇಪಣೆಯನ್ನು ಪರಿಗಣಿಸಿ ಮೀಸಲಾತಿಯಲ್ಲಿ ಅಗತ್ಯ ಬದಲಾವಣೆ ಮಾಡದಿದ್ದರೆ, ಕಾನೂನಾತ್ಮಕ ಹೋರಾಟ ನಡೆಸಿ ನ್ಯಾಯಾಲಯದ ಮೊರೆ ಹೋಗುವುದಾಗಿ ಗ್ರಾಮದ ಮುಖಂಡರಾದ ಹನುಮಂತ ನಾಯಕ್ ಹಾಗೂ ವೆಂಕಟೇಶ ಕುಮಾರ್ ಎಚ್ಚರಿಕೆ ನೀಡಿದ್ದಾರೆ. ಮನವಿಯ ಪ್ರತಿಯನ್ನು ಕಲಬುರಗಿ ಪ್ರಾದೇಶಿಕ ಆಯುಕ್ತರು, ರಾಯಚೂರು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (CEO), ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು (EO) ಹಾಗೂ ತಹಶೀಲ್ದಾರರಿಗೆ ಸಲ್ಲಿಸಲಾಗಿದೆ.**

# ನೆಲೆ ಇಲ್ಲದ ಗಂಗಮ್ಮನಿಗೆ ಆಸರೆಯಾದ ಸಿಂಧನೂರಿನ ಕಾರುಣ್ಯ ಕುಟುಂಬ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು; ಮಸ್ಕಿ ಪಟ್ಟಣದ ಸೋಮನಾಥ ನಗರದ ಅಂಗನವಾಡಿ 2ನೇ ಕೇಂದ್ರದ ಹತ್ತಿರ ಆಶ್ರಯ ಪಡೆದಿದ್ದ ಗಂಡ ಮಕ್ಕಳಿಲ್ಲದ ಗಂಗಮ್ಮ ಗಂ. ದಿ. ಅಮರೇಶ ಇವರು ಜೀವನದಲ್ಲಿ ಮನನೊಂದು ನಿಶ್ಯಕ್ತರಾದ ಇವರನ್ನು ಅಲ್ಲಿನ ಸಾರ್ವಜನಿಕರ ಮಾಹಿತಿಯ ಮೇರೆಗೆ ಸಿಂಧನೂರು ನಗರದ ಕಾರುಣ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಅವರು ಆಶ್ರಮಕ್ಕೆ ಕರೆತಂದು ಆಶ್ರಯ ನೀಡಿದರು.**

ಈ ಸಮಯದಲ್ಲಿ ಆ ತಾಯಿಯನ್ನು ವಿಚಾರಿಸದಾಗ ಆಕೆಗೆ ಗಂಡ ಮಕ್ಕಳಿಲ್ಲದ್ದು ಇಷ್ಟು ದಿನಗಳ ಕಾಲ ತಮ್ಮ ಅಣ್ಣನ ಮಕ್ಕಳ ಮನೆಯಲ್ಲಿ ವಾಸಿಸುತ್ತಿದ್ದು ಹೊಂದಾಣಿಕೆ ಇಲ್ಲದ ಕಾರಣ ಆತ್ಮಹತ್ಯೆಯ ನಿರ್ಧಾರಕ್ಕೆ ಬಂದಿದ್ದೇನು ಎನ್ನುವ ಹಲವಾರು ಅನಿಸಿಕೆಯನ್ನು ವ್ಯಕ್ತಪಡಿಸಿದರು. ಈ ಸಮಯದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ



ಡಾ. ಚನ್ನಬಸವ ಸ್ವಾಮಿ ಹಿರೇಮಠ ಇಂತಹ ವೃದ್ಧರ ಬುದ್ಧಿಮಾಂದ್ಯರ ಮಾಹಿತಿ ಬಂದ ತಕ್ಷಣ ನಾವು ಅವರನ್ನು ಕರೆದುಕೊಂಡು ಹೋಗಿ ತಾತ್ಕಾಲಿಕ ಆಶ್ರಯ ನೀಡುತ್ತೇವೆ. ನಂತರ ಅವರ ಕುಟುಂಬವನ್ನು ಪತ್ತೆ ಹಚ್ಚಿ ಮನವೊಲಿಸಿ ಅವರ ಕುಟುಂಬಕ್ಕೆ ಸೇರಿಸುವುದೇ ನಮ್ಮ ಸಂಸ್ಥೆಯ ಮೂಲ ಉದ್ದೇಶವಾಗಿದೆ.

ಒಂದು ವೇಳೆ ಅವರಿಗೆ ಯಾರು ಇಲ್ಲ ಎನ್ನುವ ವಾಸ್ತವತೆ ಗೊತ್ತಾದಾಗ ಮಾತ್ರ ಅವ-ರಿಗೆ ಜೀವಿತಾವಧಿಯ ಆಶ್ರಯ ನೀಡುತ್ತೇವೆ. ಇಂತಹ ಕಾರ್ಯಗಳನ್ನು ನಿರಂತರವಾಗಿ ದಾನಿಗಳ ಸಹಾಯ ಸಹಕಾರದಿಂದ ಮಾಡುತ್ತಿದ್ದೇವೆ. ಆದರೆ ಈಗ ಆಶ್ರಮದಲ್ಲಿ ಆಶ್ರಯದಾತರುಗಳ ಸಂಖ್ಯೆ ಹೆಚ್ಚಾಗಿರುವುದ-ರಿಂದ ಆಶ್ರಮದ ನಿರ್ವಹಣೆ ಬಹಳ ಕಷ್ಟದಲ್ಲಿ ನಡೆಯುತ್ತಿದೆ. ಆದುದರಿಂದ ದಯಾಳುಗಳಾದ ತಾವುಗಳು ತಮ್ಮ ಕೈಯಿಂದಾದಂತಹ ಸಹಾಯವನ್ನು ನೇರ ಆಶ್ರಮಕ್ಕೆ ಬಂದು ಇಲ್ಲದಿದ್ದರೆ ಫೋನ್ ಅಂಡ್ ಗೂಗಲ್ ಪೇ 9731983111 ಅಥವಾ 9110858985 ಈ ನಂಬರ್ ಗಳಿಗೆ ಮಾಡಬಹುದು. ತಾವು ಮಾಡಿರುವಂತಹ ಸಹಾಯಕ್ಕೆ ಸೂಕ್ತ ರಶೀದಿಯನ್ನು ಕಳುಹಿಸಲಾಗುವುದು.

ಹಾವು ಮಾಡುವ ಈ ಸಹಾಯ ಅದೆಷ್ಟೋ ಅಂದ ಅನಾಥರ ಬಾಳಿಕೆ ಬೆಳಕು ನೀಡುತ್ತದೆ. ಎಂದು ಸಾರ್ವಜನಿಕರಲ್ಲಿ ಸಹಾಯಕ್ಕಾಗಿ ವಿನಂತಿಸಿಕೊಂಡರು. ಈ ಸಮಯದಲ್ಲಿ ಈ ತಾಯಿಯ ಮಾಹಿತಿ ನೀಡಿದ ಅನಿತಾ ಗಂ.ಪಂಪನಗೌಡ ಹಾಗೂ ಅಂಗನವಾಡಿಯ ಸಹಾಯಕಿಂ-ಯರಾದ ಉಮಾದೇವಿ ಗಂ. ನಾಗಪ್ಪ ಹಾಗೂ ಆಶ್ರಮದ ಸಿಬ್ಬಂದಿಗಳಾದ ಮ-ರಿಯಪ್ಪ. ಮಹಾಂತೇಶ ದೋಟಿಹಾಳ. ಹರ್ಷವರ್ಧನ ಅನೇಕರು ಉಪಸ್ಥಿತರಿದ್ದರು.

# ಮಸ್ಕಿಯಲ್ಲಿ ಮೊಳಗಿದ ದೇಶಭಕ್ತಿಯ ಘೋಷಣೆ

## ಅದ್ದೂರಿ ತಿರಂಗ ಯಾತ್ರೆ; ಮಾಜಿ ಶಾಸಕ ಪ್ರತಾಪಗೌಡ ಪಾಟೀಲರಿಂದ ಚಾಲನೆ

❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ: 80ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಸ್ಕಿ ಪಟ್ಟಣದಲ್ಲಿ ಗುರುವಾರ ಬೃಹತ್ ತಿರಂಗ ಯಾತ್ರೆ ಅದ್ದೂರಿಯಾಗಿ ನಡೆಯಿತು.**

ಪಟ್ಟಣದ ತೇರಿನ ಮನೆ ಮುಂಭಾಗದಲ್ಲಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಅವರು ತಿರಂಗ ಯಾತ್ರೆಗೆ ಚಾಲನೆ ನೀಡಿದರು.ತ್ರಿವರ್ಣ ಧ್ವಜ ಹಿಡಿದು ಯಾತ್ರೆಯಲ್ಲಿ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ಯುವಕರು, ಶಿಕ್ಷಕರು, ಉಪನ್ಯಾಸಕರು ಹಾಗೂ ಮುಖಂಡರು ಪಾಲ್ಗೊಂಡು ದೇಶಭಕ್ತಿಯ ಘೋಷಣೆಗಳನ್ನು ಮೊಳಗಿಸಿದರು. ನಗರದ



ಪ್ರಮುಖ ಬೀದಿಗಳಲ್ಲಿ ಸಾಗಿದ ಯಾತ್ರೆಯಿಂದ ಮಸ್ಕಿಯಲ್ಲಿ ದೇಶಭಕ್ತಿಯ ವಾತಾವರಣ ನಿರ್ಮಾಣವಾಗಿತ್ತು. ನಂತರ ತಿರಂಗ ಯಾತ್ರೆಯು ಬ್ರಮರಂಬ ದೇವಸ್ಥಾನದ ಬಳಿ ಬಂದು ತಲುಪಿತು. ಈ ಸಂದರ್ಭದಲ್ಲಿ

ಮಸ್ಕಿ ಬಿಜೆಪಿ ಮಂಡಲ ಅಧ್ಯಕ್ಷ ಶರಣಬಸವ ಸೊಪ್ಪಿಮಠ, ಮುಖಂಡರಾದ ಡಾ. ಬಿ.ಎಚ್. ದಿವಟರ್, ಪಂಪಣ್ಣ ಗುಂಡಳ್ಳಿ, ಪ್ರಸನ್ನ ಪಾಟೀಲ, ಡಾ. ಮಲ್ಲಿಕಾರ್ಜುನ ಇತ್ಲಿ, ಅಶೋಕ್ ಸಿಂಗ್ ಠಾಕೂರ್, ಕರಿಬಸಯ್ಯ, ಸುಗಣ್ಣ ಬಾಳೆಕಾಯಿ, ಮೌನೇಶ ನಾಯಕ್,ರಮೇಶ ಉದ್ಬಾಳ, ಚನ್ನಬಸವ ದೇಸಾಯಿ, ರಮೇಶ ನಾಯಕ್ ತೀರ್ಥಬಾವಿ, ಬಸವರಾಜ ಉದ್ಬಾಳ, ನಿವೇದಿತ ಬುಳ್ಳ, ಶಾಂತಮ್ಮ ಧನ್‌ಶೆಟ್ಟಿ, ನಾಗರಾಜ ಎಂಬಲದ, ಗಂಗಾಧರ ಕಂಬಳಿಮಠ, ನಾಗರಾಜ ಅಡವಿಬಾವಿ ತಾಂಡ ಸೇರಿದಂತೆ ಹಲವರು ಭಾಗವಹಿಸಿದ್ದರು.ಮಸ್ಕಿ ಪುರಸಭೆ ಅಧ್ಯಕ್ಷ ಸುರೇಶ ಅರಸುರ್ ಹಾಗೂ ಸದಸ್ಯರಾದ ಮಲ್ಲಯ್ಯ ಅಂಬಾಡಿ, ಮೌನೇಶ ಮುರಾರಿ, ಚೇತನ್ ಪಾಟೀಲ, ಮಲ್ಲಿಕಾರ್ಜುನ ಬ್ಯಾಳಿ, ಭರತ್‌ಕುಮಾರ, ರಮೇಶ ಗುಡಿಸಲಿ, ಡಾ. ಸಂತೋಷ, ಬಸವರಾಜ, ಬುಕ್ಕಣ್ಣ, ಮಸೂದ್ ಪಾಷಾ, ಅಜ್ಮೀರ್ ಸೇರಿದಂತೆ ಪುರಸಭೆ ಸದಸ್ಯರು, ಮುಖಂಡರು ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಶಾಲಾ-ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಶಿಕ್ಷಕರು, ಉಪನ್ಯಾಸಕರು ಹಾಗೂ ಯುವಕರ ಉತ್ಸಾಹದ ಪಾಲ್ಗೊಳ್ಳುವಿಕೆ ಗಮನ ಸೆಳೆಯಿತು. ದೇಶದ ಏಕತೆ, ಅಖಂಡತೆ ಮತ್ತು ದೇಶಪ್ರೇಮದ ಸಂದೇಶ ಸಾರುವ ಮೂಲಕ ತಿರಂಗ ಯಾತ್ರೆ ಯಶಸ್ವಿಯಾಗಿ ನಡೆಯಿತು.

# ಅನುದಾನದ ಹಣ ದುರುಪಯೋಗ ಮಾಡಿಕೊಂಡ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕ್ಕೆ ಜ ಕ ರ ಸೇನೆ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮದಲ್ಲಿ ಎಇಇ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಹನುಮಂತಪ್ಪರವರನ್ನು ಕರ್ತವ್ಯ ಲೋಪದ ಮೇಲೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾ-ರಿಗಳು ಜಿಲ್ಲಾ ಪಂಚಾಯತ್ 23-06-2026 ರಂದು ಬಿಡುಗಡೆಗೊಳಿಸಿರುತ್ತಾರೆ ಕರ್ತವ್ಯದಿಂದ ಬಿಡುಗಡೆಗೊಂಡ ನಂತರ ಅನುದಾನ ಬಳಸಿಕೊಂಡಿರುವ ಕೆಆರ್ ಐಡಿ-ಎಲ್ ಹನುಮಂತಪ್ಪ ಎಇಇ ಹಾಗೂ ಕೆಆರ್ ಐಡಿಎಲ್ ಡಿಡಿಯನರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಜಯ ಕರ್ನಾಟಕ ರಕ್ಷಣಾ ಸೇನೆಯ ತಾಲೂಕ ಅಧ್ಯಕ್ಷ ಹನುಮಂತ ನಾಯಕ್ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್ ರವ-ರಿಗೆ ಮನವಿಯನ್ನು ಸಲ್ಲಿಸಿ ಮಾತನಾಡಿದ ಅವರು**



ಕರ್ತವ್ಯದಿಂದ ಬಿಡುಗಡೆ ಗೊಂಡ ನಂತರ ಕೆ ಆರ್ ಐ ಡಿ ಎಲ್ ಖಾತೆಗೆ 03-07-2026 ರಂದು 5,48,00,000 ಐದು ಕೋಟಿ ನಲವತ್ತಾ ಎಂಟು ಲಕ್ಷ ರೂ ಬಿಡುಗಡೆ ಯಾಗಿದ್ದು ಬಿಡುಗಡೆಗೊಂಡ ಅನುದಾನವನ್ನು ಕೆಆರ್‌ಐಡಿಎಲ್ ಡಿಡಿ (KRIDL DD) ಹಾಗೂ ಎಇಇ ಹನುಮಂತಪ್ಪ ತಮಗೆ ಬೇಕಾಗಿರುವ 6 ವಿವಿಧ ಖಾತೆಗಳಿಗೆ ಬೆಂಗಳೂರು ಯೂನಿಯನ್ ಬ್ಯಾಂಕಿನಿಂದ ಹಣ ಬಿಡುಗಡೆಯಾಗಿ ಕೇವಲ ಒಂದು ಗಂಟೆ ಯೊಳಗೆ ಹಣ ವರ್ಗಾವಣೆ ಮಾಡಿಕೊಂಡಿರುತ್ತಾರೆ ಕರ್ತವ್ಯದಿಂದ ಬಿಡುಗಡೆ ಗೊಂಡ ನಂತರವು ಬೇರೊಬ್ಬ ಅಧಿಕಾರಿಗೆ ಅಧಿಕಾರವನ್ನು ಹಸ್ತಾಂತರಿಸದೆ ತಾವೇ ತಮಗೆ ಬೇಕಿರುವ ಖಾತೆಗಳಿಗೆ ಹಣ ವರ್ಗಾವಣೆ ಮಾಡಿ ಸರ್ಕಾರಕ್ಕೆ ವಂಚನೆ ಮಾಡಿರುತ್ತಾರೆ.

ಸರ್ಕಾರದ ಹಣವನ್ನು ದುರಪಯೋಗ ಮಾಡಿಕೊಂಡ ಎಇಇ ಹನುಮಂತಪ್ಪ ಹಾಗೂ ಡಿಡಿ ಗೋಕುಲೆಯವರ ವಿರುದ್ಧ ಕ್ರಿಮಿನಲ್ ಮೊಕ್ಕದ್ದಮೆ ದಾಖಲಿಸಿ ಸರ್ಕಾರದ ಹಣವನ್ನು ಮರುಪಾವತಿ ಮಾಡಿಸಿಕೊಂಡು ಅವರುಗಳ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲವಾದಲಿ ತಮ್ಮ ಕಾರ್ಯಾಲಯದ ಮುಂದೆ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಒತ್ತಾಯಿಸಿದರು

# ನೀರಸ ಕರ್ನಾಟಕ ಬಂದ್, ರಾಜ್ಯಾದ್ಯಂತ ಮಿಶ್ರ ಪ್ರತಿಕ್ರಿಯೆ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ತಮಿಳುನಾಡಿಗೆ ಪ್ರತಿದಿನ 12,000 ಕ್ಯೂಸೆಕ್ ಕಾವೇರಿ ನೀರು ಬಿಡುಗಡೆ ಮಾಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ನಿರ್ದೇಶನವನ್ನು ವಿರೋಧಿಸಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕರೆ ನೀಡಲಾಗಿದ್ದ ಕರ್ನಾಟಕ ಬಂದ್‌ಗೆ ರಾಜ್ಯಾದ್ಯಂತ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.**

ವಾಟಾಳ್ ನಾಗರಾಜ್ ಪೊಲೀಸ್ ವಶಕ್ಕೆ :ಪ್ರತಿಭಟನೆ ನಡೆಸಲು ಮುಂದಾದ ಕನ್ನಡ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಅವರನ್ನು ಬೆಂಗಳೂ-ರಿನ ಸಂಜಯ್ ನಗರದಲ್ಲಿರುವ ಅವರ ನಿವಾಸದಲ್ಲೇ ಪೊಲೀಸರು ವಶಕ್ಕೆ ಪಡೆದರು. ಹಲವು ಕನ್ನಡಪರ ಸಂಘಟನೆಗಳ ಮುಖಂಡರನ್ನು ಸಹ ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸರು ಬೆಳಿಗ್ಗೆಯೇ ವಶಕ್ಕೆ ಪಡೆದಿದ್ದಾರೆ. ರಾಜಧಾನಿಯಲ್ಲಿ ಬಂದ್‌ನ ಪ್ರಭಾವ ತೀರಾ ಕಡಿಮೆಯಿತ್ತು. ಕೆಂಪೇಗೌಡ ಬಸ್ ನಿಲ್ದಾಣದಿಂದ ಬಸ್‌ಗಳು ಎಂದಿನಂತೆ ಸಂಚರಿಸಿದವು. ಶಾಲಾ-ಕಾಲೇಜುಗಳು, ವಿಶ್ವವಿದ್ಯಾಲಯಗಳು ಮತ್ತು ವಾಣಿಜ್ಯ



ಸಂಸ್ಥೆಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು.

ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೂ ಯಾವುದೇ ವ್ಯತ್ಯಯ ಉಂಟಾಗಲಿಲ್ಲ. ಬಸ್ ನಿಲ್ದಾಣದಿಂದ ಬೆಂಗಳೂರು, ಮಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಗೆ ಬಸ್ ಸೇವೆಗಳು ಮುಂದುವರಿದವು.



ಅಂಗಡಿಗಳು, ಹೋಟೆಲ್‌ಗಳು ಮತ್ತು ಇತರ ವಾಣಿಜ್ಯ ಸಂಸ್ಥೆಗಳು ತೆರೆದಿದ್ದವು. ಆಟೋ ಹಾಗೂ ಟ್ಯಾಕ್ಸಿಗಳ ಸಂಚಾರಕ್ಕೂ ದೊಡ್ಡ ಮಟ್ಟದ ವ್ಯತ್ಯಯ ಕಂಡುಬರಲಿಲ್ಲ.

ಬಂದ್‌ಗೆ ಬೆಂಬಲ ಸೂಚಿಸಿ ಬೆಂಗಳೂರು ಹೊರವಲಯದ ಅತ್ತಿಬೆಲೆ ಗಡಿಯಲ್ಲಿ ಕನ್ನಡ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಮಂಜುನಾಥ್ ನೇತೃತ್ವದಲ್ಲಿ ರಸ್ತೆ ತಡೆ ನಡೆಸಲಾಯಿತು. ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದರು.

ರಾಮನಗರದಲ್ಲಿ ಖಾಲಿ ಕೊಡ ಪ್ರದರ್ಶನ : ರಾಮನಗರದಲ್ಲಿ ಬಂದ್ ಬೆಂಬಲಿಸಿ ಕನ್ನಡಪರ ಹೋರಾಟಗಾರರು ಬೆಂಗಳೂರು-ಮೈಸೂರು ಹಳೆಯ ಹೆದ್ದಾರಿಯನ್ನು ತಡೆಯಲು ಯತ್ನಿಸಿದರು. ಐಜೂರು ವೃತ್ತದಲ್ಲಿ ಕಾರ್ಯಕರ್ತರು ಖಾಲಿ ಬಿಂದಿಗೆಗಳನ್ನು ಹಿಡಿದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಹೋರಾಟಗಾರರನ್ನು ವಶಕ್ಕೆ ಪಡೆದರು. ಮಂಡ್ಯದಲ್ಲಿ ಕಾವೇರಿದ ಪ್ರತಿಭಟನೆ : ಮಂಡ್ಯ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಪ್ರತಿಭಟನೆಗಳು ತೀವ್ರಗೊಂಡರೆ, ಬೆಂಗಳೂರು, ಮೈಸೂರು, ಹಾಸನ, ಬಳ್ಳಾರಿ ಮತ್ತಿತರ ಪ್ರಮುಖ ನಗರಗಳಲ್ಲಿ ಸಾರಿಗೆ ಸಂಚಾರ, ವ್ಯಾಪಾರ ವಹಿವಾಟು ಮತ್ತು ಶೈಕ್ಷಣಿಕ ಚಟುವಟಿ-ಕೆಗಳು ಬಹುತೇಕ ಸಹಜವಾಗಿಯೇ ಮುಂದುವರಿದವು.

ಕಾವೇರಿ ಹೋರಾಟದ ಪ್ರಮುಖ ಕೇಂದ್ರವಾಗಿರುವ ಮಂಡ್ಯದಲ್ಲಿ ರೈತರು ಹಾಗೂ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಸಂಜಯ್ ವೃತ್ತ ಸೇರಿದಂತೆ ಹಲವು ಪ್ರದೇಶಗಳಲ್ಲಿ ಪ್ರತಿಭಟನೆ ನಡೆಸಿದರು. ಖಾಲಿ ಮಡಿಕೆಗಳು ಮತ್ತು ಹುರುಳಿ ಕಾಳುಗಳನ್ನು ಹಿಡಿದು ನಮ ನೀರು, ನಮ ಹಕ್ಕು ಎಂಬ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ಬೆಂಗಳೂರುಮೈಸೂರು ಹಳೆಯ ಮೈಸೂರಿನಲ್ಲಿ ಕಾರ್ಯಕರ್ತರು ವಶಕ್ಕೆ : ಮೈಸೂರುನಲ್ಲಿ ಬಂದ್ ಪ್ರತಿಭಟನೆಗಳಿಗೆ ಮಾತ್ರ ಸೀಮಿತವಾಗಿತ್ತು. ಬಸ್ ನಿಲ್ದಾಣದಿಂದ ಇತರೆ ಜಿಲ್ಲೆಗಳಿಗೆ ಸಾರಿಗೆ ಸೇವೆಗಳು ಎಂದಿನಂತೆ ಮುಂದುವರಿದವು. ಅಂಗಡಿ ಮುಂಗಟ್ಟುಗಳು ಹಾಗೂ ಹೋಟೆಲ್‌ಗಳು ತೆರೆದಿದ್ದವು. ಬಸ್‌ಗಳನ್ನು ತಡೆಯಲು ಯತ್ನಿಸಿದ ಕೆಲ ಕನ್ನಡ ಪರ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಹಾಸನದಲ್ಲಿ ರಸ್ತೆ ತಡೆ : ಹಾಸನ ಹಾಗೂ ಬಳ್ಳಾರಿಯಲ್ಲಿ ಜನಜೀವನ ಸಹಜವಾಗಿತ್ತು. ಕೊಪ್ಪಳದಲ್ಲಿ ಕನ್ನಡ ರಕ್ಷಣಾ ವೇದಿಕೆ ಕಾರ್ಯಕರ್ತರು ಹೆಗ್ಗನಾಳ್ ಟೋಲ್ ಗೇಟ್ ಬಳಿ ಲಾರಿಗಳನ್ನು ತಡೆದು ಪ್ರತಿಭಟನೆ ನಡೆಸಿದರು. ಅನೇರವಾಗಿ ಕೈಜೋಡಿಸುವ ಬದಲು ಪ್ರತಿಭಟನೆಗೆ ನೈತಿಕ ಬೆಂಬಲ ನೀಡುವುದಷ್ಟೇ ತಮ ನಿಲುವು ಎಂದು ಸ್ಪಷ್ಟಪಡಿಸಿದವು.

## ನೇಮಕಾತಿ ಪ್ರಕಟಣೆ


**KSRLPS ನೇಮಕಾತಿ 2026 – 14 ಬ್ಲಾಕ್ ಮ್ಯಾನೇಜರ್ ಮತ್ತು ಕ್ಲಸ್ಟರ್ ಸೂಪರ್‌ವೈಸರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಆಗಸ್ಟ್ 5, 2026**

ಏಖಖಐಕಖ ನೇಮಕಾತಿ 2026: 14 ಬ್ಲಾಕ್ ಮ್ಯಾನೇಜರ್ ಮತ್ತು ಕ್ಲಸ್ಟರ್ ಸೂಪರ್‌ವೈಸರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿವೃದ್ಧಿ ಸಂಘವು (KSRLPS) ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಬ್ಲಾಕ್ ಮ್ಯಾನೇಜರ್ ಮತ್ತು ಕ್ಲಸ್ಟರ್ ಸೂಪರ್‌ವೈಸರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದಕ್ಷಿಣ ಕನ್ನಡ ಮತ್ತು ಕಲಬುರಗಿಯಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 15–ಆಗಸ್ಟ್–2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: ksrlps.karnataka.gov.in

## ಕಂಪ್ಲಿಯಲ್ಲಿ ಶ್ರೀ ಹಾನಗಲ್ ಕುಮಾರೇಶ್ವರ ಪುರಾಣ ಆರಂಭ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಇಲ್ಲಿನ ಸಂಗಾತ್ರಯ ಸಂಸ್ಕೃತ ಪಾಠ ಶಾಲೆಯಲ್ಲಿ ಆ. 13ರಿಂದ ಸೆ. 12 ರವರೆಗೆ ಹಾನಗಲ್ ಕುಮಾರೇಶ್ವರ ಪುರಾಣ ಪ್ರತಿದಿನ ಸಂಜೆ 6–30 ರಿಂದ ಕಾರ್ಯಕ್ರಮ ನಡೆಯಲಿದೆ. ಗುರುವಾರರಂದು ಷಟ್‌ಸ್ಥಲ ಧ್ವಜಾರೋಹಣ ಶ್ರೀ ಷ.ಬ್ರ. 108 ಕರಿಸಿದ್ದೇಶ್ವರ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಕರಿಸಿದ್ದೇಶ್ವರ ಸಂಸ್ಥಾನಮಠ, ಬುಕ್ಕಸಾಗರ ಶ್ರೀ ದಿವ್ಯ ಸಾನಿಧ್ಯದಿಂದ ನೆರವೇರಿತು.**



ಸಾಂಗತ್ರಯ ಸಂಸ್ಕೃತ ಪಾಠಶಾಲೆಯ ಕಾರ್ಯಕಾರಿ ಮಂಡಳಿಯ ಸರ್ವರು ಹಾಗೂ ವೀರಶೈವ ಸಮಾಜದ ಸದ್ಭಕ್ತರು ಭಾಗವಹಿಸಿದ್ದರು. ಪುರಾಣ ಪ್ರಸ್ತುತಿ ಪೂಜ್ಯಶ್ರೀ ಪದ್ಮಾಕ್ಷರಯ್ಯ ತಾತನವರು, ಬೃಹನ್ಮಠ, ಸುಳೇಕಲ್ (ಚಕ್ರಶಿಲೆ) ವಿಶ್ವನಾಥ ಶಾಸ್ತ್ರಿ ಅವರು ಪುರಾಣ ಪ್ರವಚನ ನೀಡಲಿದ್ದಾರೆ. ರೇಣುಕಾರಾಜ ಗವಾಯಿ ಪುರಾಣ ಪಠಣ ಮತ್ತು ಸಂಗೀತ ಸೇವೆ ನೀಡಲಿದ್ದಾರೆ. ಜಿ. ಸುಧಾಕರ್ ತಬಲಾಸಾಥ್ ನೀಡಲಿದ್ದಾರೆ. ಎಂದು ಪ್ರಕಟಣೆ ತಿಳಿಸಿದೆ.

## ರೀಲ್ಸ್ ನೋಡಬೇಡ ಎಂದಿದ್ದಕ್ಕೆ ಜೀವವನ್ನೇ ಕಳೆದುಕೊಂಡ ವಿದ್ಯಾರ್ಥಿನಿ

❏ ನೈಜ್ಯ ದೆಸೆ ನ್ಯೂಸ್

**ಹುಬ್ಬಳ್ಳಿ: ಹೆಚ್ಚು ಮೊಬೈಲ್ ಬಳಕೆ ಮಾಡಬೇಡ, ರೀಲ್ಸ್ ನೋಡಬೇಡ ಎಂದು ಪೋಷಕರು ಬುದ್ಧಿವಾದ ಹೇಳಿದ್ದಕ್ಕೆ ಮನನೊಂದ ವಿದ್ಯಾರ್ಥಿನಿ ವಿಷ ಸೇವಿಸಿ ಆತಹತ್ಯೆ ಮಾಡಿಕೊಂಡಿರುವ ಘಟನೆ ಗರಗ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.**



ಧಾರವಾಡ ತಾಲೂಕಿನ ಕೊಟಬಾಗಿ ಗ್ರಾಮದ ಮೇಘಾ ಗುಬ್ಬಣ್ಣವರ (20) ಎಂಬ ವಿದ್ಯಾರ್ಥಿನಿಯೇ ಆತಹತ್ಯೆ ಮಾಡಿಕೊಂಡವರು.ಧಾರವಾಡದ ಖಾಸಗಿ ಕಾಲೇಜೊಂದರಲ್ಲಿ ಡಿಇಡಿ ವಿದ್ಯಾಭ್ಯಾಸ ಮಾಡುತ್ತಿದ್ದ ಮೇಘಾ ದಿನವಿಡೀ ಮೊಬೈಲ್‌ನಲ್ಲಿ ರೀಲ್ಸ್ ನೋಡುತ್ತಾ ಕಾಲಹರಣ ಮಾಡುತ್ತಿದ್ದಳು. ಅದನ್ನು ಗಮನಿಸುತ್ತಿದ್ದ ಆಕೆಯ ತಾಯಿ ರೀಲ್ಸ್ ಹೆಚ್ಚು ನೋಡಬೇಡ, ಓದಿನ ಕಡೆ ಗಮನ ಕೊಡು ಎಂದು ಬುದ್ಧಿವಾದ ಹೇಳಿದ್ದಾರೆ. ಅಷ್ಟಕ್ಕೇ ಮೇಘಾ ಮನೆಯಲ್ಲಿ ವಿಷ ಸೇವಿಸಿ ಆತಹತ್ಯೆ ಮಾಡಿಕೊಂಡಿದ್ದಾಳೆ. ಮಗಳ ಈ ನಿರ್ಧಾರದಿಂದ ಕುಟುಂಬದವರು ದುಃಖಿತರಾಗಿದ್ದಾರೆ. ಈ ಸಂಬಂಧ ದೂರು ದಾಖಲಾಗಿದ್ದು, ಪೊಲೀಸರು ತನಿಖೆ ಕೈ

## ನಾಗದೇವತಾ ನೂತನ ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಅಶ್ವತ್ಥನಾರಾಯಣ ದೇವತಾ ಕಲ್ಯಾಣ ಮಹೋತ್ಸವ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಪಟ್ಟಣದ 5ನೇ ವಾರ್ಡಿನ ಇಂದಿರಾನಗರದಲ್ಲಿರುವ ಉದ್ಭವ ನಾಗೇಂದ್ರ ದೇವಸ್ಥಾನ(ಜೋಡಿ ನಾಗದೇವತಾ)ದಲ್ಲಿ ಜೋಡಿ ನಾಗದೇವತಾ ನೂತನ ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಅಶ್ವತ್ಥನಾರಾಯಣ ದೇವತಾ ಕಲ್ಯಾಣ ಮಹೋತ್ಸವ ಶ್ರದ್ಧಾಭಕ್ತಿಯಿಂದ ಗುರುವಾರ ಜರುಗಿತು.**

ಇಲ್ಲಿನ ದೇವಸ್ಥಾನದಲ್ಲಿ ಶಿವರಾಮಕೃಷ್ಣಶರ್ಮಾ(ಶಿವಾಜಿ) ಅವರ ಸಾನಿಧ್ಯದಲ್ಲಿ ಬೆಳಿಗ್ಗೆ ಗಂಗೆಪೂಜೆ, ಗೋ ಪೂಜೆ, ಮಹಾ ಗಣಪತಿ, ಪುಣ್ಯ ವಚನೆ, ಕಂಕಣ ಪೂಜೆ, ನವಗ್ರಹ ಪೂಜೆ, ಪಂಚಾಮೃತಾಭಿಷೇಕ, ಜಾಲಾಧಿವಾಸ, ಪುಷ್ಪಾಧಿವಾಸ, ಹೋಮಾ, ಹವನ, ಪೂರ್ಣಾಹುತಿ, ಅಷ್ಟೋತ್ತರ ಪೂಜೆ, ಮಹಾಮಂಗಳಾರತಿ ಸೇರಿದಂತೆ ವಿವಿಧ



ಧಾರ್ಮಿಕ ಕಾರ್ಯಕ್ರಮ ಶಾಸ್ತ್ರತವಾಗಿ ನೆರವೇರಿದವು. ನಂತರ ಜೋಡಿ ನಾಗದೇವತಾ ನೂತನ ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಅಶ್ವತ್ಥನಾರಾಯಣ ದೇವತಾ ಕಲ್ಯಾಣ ಮಹೋತ್ಸವ ಶ್ರದ್ಧೆಯಿಂದ ನಡೆಯಿತು. ಇಲ್ಲಿನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಲ್ಯಾಣ ಮಹೋತ್ಸವ ಹಿನ್ನಲೆ ಸಾಕಷ್ಟು ಭಕ್ತರು ಆಗಮಿಸಿ, ಕಾಯಿ, ಕರ್ಪೂರ ಅರ್ಪಿಸಿ, ದರ್ಶನ ಪಡೆದರು. ತದನಂತರ ಅನ್ನ ಸಂತಾರ್ಪಣೆ ಸ್ವೀಕರಿಸಿದರು.

ಯುವ ಮುಖಂಡ ಜಿ.ಯಲ್ಲಪ್ಪ ಮಾತನಾಡಿ, ಲೋಕಕಲ್ಯಾಣ, ನಾಡಿನಲ್ಲಿ ಸಮೃದ್ಧ ಮಳೆ, ಬೆಳೆಯೊಂದಿಗೆ ಜನರ ನೆಮ್ಮದಿಯ ಜೀವನಕ್ಕಾಗಿ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ದೇವರ ಪೂಜೆ, ಪುನಸ್ಕಾರ, ಸಂಸ್ಕೃತಿ, ಸಂಪ್ರದಾಯಗಳ ಆಚ–ರಣೆ ಮಾಡಲಾಗುತ್ತಿದೆ. ಇಲ್ಲಿನ ಸಹಸ್ರಾರು ಭಕ್ತರ ಉದ್ಭವ ನಾಗೇಂದ್ರ ದೇವಸ್ಥಾನದಲ್ಲಿ ನೂತನವಾಗಿ ಜೋಡಿ ನಾಗದೇವತಾ ಮತ್ತು ಅಶ್ವತ್ಥನಾರಾಯಣ ಕಲ್ಯಾಣ ಮಹೋತ್ಸವ ಶ್ರದ್ಧೆಯಿಂದ ಮಾಡಲಾಯಿತು. ದೇವರ ಪೂಜೆ ಮತ್ತು ಆರಾಧನೆಯಿಂದ ಭಕ್ತರ ಇಷ್ಟಾರ್ಥ–ಗಳು ಲಭಿಸಲು ಸಾಧ್ಯ. ಮನುಷ್ಯನ ಬದುಕಿಗೆ ಭಕ್ತಿ, ಭಾವ ಅಗತ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಕರೇಕಲ್ ಮನೋಹರ, ಎಸ್.ಸುರೇಶ, ಯು. ವೆಂಕಟೇಶ, ಜಿ.ರಾಜ, ಆಟೋ ರಾಘವೇಂದ್ರ, ಬಿ.ಪಕ್ಕೀರಪ್ಪ, ಜಿ.ವೆಂಕಟೇಶ, ರಮೇಶ, ಯು.ನವೀನ್, ಎಸ್.ವಿರೇಶ, ಡೆಕೋರೇಷನ್ ರಾಘವೇಂದ್ರ, ಬಸವರಾಜ ಸೇರಿದಂತೆ ಜೋಡಿ ನಾಗದೇವತಾ ಸದ್ಭಕ್ತರು ಪಾಲ್ಗೊಂಡಿದ್ದರು.

## ಬೆಳಗೋಡ್‌ಹಾಳ್ ನಲ್ಲಿ ನೆನೆಗುದಿಗೆ ಬಿದ್ದಿದ್ದ ಖಬರುಸ್ತಾನ್ ಕಾಮಗಾರಿ ಆದಷ್ಟು ಬೇಗ ಆರಂಭ : ಶಾಸಕ ಜೆ.ಎನ್.ಗಣೇಶ್

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ನಂ.10 ಮುದ್ದಾಪುರ ಗ್ರಾಪಂಯ ವ್ಯಾಪ್ತಿಯ ಬೆಳಗೋಡ್‌ಹಾಳ್ ಗ್ರಾಮದಲ್ಲಿ ನೆನೆಗುದಿಗೆ ಬಿದ್ದಿದ್ದ ಖಬರುಸ್ತಾನ್ ಕಾಮಗಾರಿಯನ್ನು ಆದಷ್ಟು ಬೇಗ ಆರಂಭಿಸುವಂತೆ ಸಂಬಂಧಿಸಿದವರಿಗೆ ಸೂಚಿಸಿ, ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲಾಗುವುದು ಎಂದು ಶಾಸಕ ಜೆ.ಎನ್.ಗಣೇಶ್ ಹೇಳಿದರು.**

ಇತ್ತೀಚೆಗೆ ಪಟ್ಟಣದ ಹೊಸಪೇಟೆ ಬೈಪಾಸ್ ರಸ್ತೆಯ ಶಾಸಕರ ಕಛೇ–ರಿಗೆ ಮುಸ್ಲಿಂ ಸಮಾಜದವರು ಭೇಟಿ ನೀಡಿ, ಸಮಾಜದ ಅಭಿವೃದ್ಧಿಗೆ ಸಂಬಂಧಿಸಿಡಂತೆ ಚರ್ಚಿಸಿದಾಗ ಮಾತನಾಡಿ, ಮುಸ್ಲಿಂ ಸಮಾಜದವರು ವೈಯಕ್ತಿಕತೆಯನ್ನು ಬದಿಗಿಟ್ಟು, ಒಗ್ಗೂಡಿದಾಗ ಮಾತ್ರ ಸರ್ಕಾರದ ಪ್ರತಿಯೊಂದು ಯೋಜನೆಗಳನ್ನು ಸದ್ಭಳಕೆ ಮಾಡಿಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಮುಸ್ಲಿಂ ಸಮಾಜದವರು ಮುಂದಾಗಬೇಕು. ಪ್ರತಿಯೊಂದು ಹಂತದಲ್ಲಿ ನಿಮ್ಮ ಜೊತೆಗಿದ್ದು, ಸಮಾಜದ ಏಳಿಗೆಗೆ ಮತ್ತು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸದಾ ಸಿದ್ಧ ಎಂದರು.

ಮುಸ್ಲಿಂ ಸಮಾಜದ ಯುವ ಮುಖಂಡ ಬಿ.ನಬೀಸಾಬ್ ಮಾತನಾಡಿ, ಬೆಳಗೋಡ್‌ಹಾಳ್ ಗ್ರಾಮದಲ್ಲಿ ಮುಸ್ಲಿಂ ಸಮಾಜದವರು ವಾಸಿಸುತ್ತಿದ್ದು, ಇಲ್ಲಿನ ಮೃತರ ದಫನ್ ಮಾಡಲು ಜಾಗದ ಸಮಸ್ಯೆಯಾಗುತ್ತಿತ್ತು.

ಆದರೆ, ಜನಪ್ರಿಯ ಶಾಸಕರಾದ ಜೆ.ಎನ್.ಗಣೇಶ್ ಅವರು ಖಬರುಸ್ತಾನ್ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಇದ–ರಿಂದ ಸಮಾಜದ ಏಳಿಗೆ ಜೊತೆಗೆ ಖಬರುಸ್ತಾನ್ ಅಭಿವೃದ್ಧಿಗೊಳ್ಳುತ್ತಿರುವುದು ಹರ್ಷದಾಯಕವಾಗಿದೆ. ಇಲ್ಲಿನ



ಖಬರುದ್ದಾನ್‌ಗೆ ತೆರಳುವ ರಸ್ತೆಯನ್ನು ಸಿಸಿ ರಸ್ತೆಯನ್ನಾಗಿ ಅಭಿವೃದ್ಧಿಗೊಳಿಸಲು ಶಾಸಕರು ಅನುದಾನ ನೀಡಬೇಕು ಎಂದರು. ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಎನ್. ಹಬೀಬ್ ರೆಹಮಾನ್, ಮುಖಂಡರಾದ ಸಿ.ಆರ್. ಹನುಮಂತ, ಮಸ್ತಾನ್ ಪೇಂಟರ್, ಬಿ.ಸಿದ್ದಪ್ಪ, ವರದಿ ಶಬ್ಬೀರ್, ಹೊನ್ನೂ, ಅಗರಿ ಮೌಲಾ, ವಿರುಪಣ್ಣ, ವಾಸುಕುಮಾರ, ದೊಡ್ಡಬಸವರಾಜ ಬಡಗಿ ಸೇರಿದಂತೆ ಇತರರು ಇದ್ದರು.

## ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಪೌಷ್ಟಿಕ ಆಹಾರ ದಿನಾಚರಣೆ ಆಚರಣೆ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಸಮೀಪದ ಜವಳಗೇರಾ ಗ್ರಾಮದ ಮಾರುತಿ ನಗರದಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಂಧನೂರು ಇವರು ಸಂಯುಕ್ತ ಆಶ್ರಯದಲ್ಲಿ ಮಾರುತಿ ನಗರದ ಅಂಗನವಾಡಿ ಕೇಂದ್ರದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು**

ನಂತರ ಕಾರ್ಯಕ್ರಮದ ಕುರಿತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಮಾತನಾಡಿ ಆರೋಗ್ಯಕರ ಜೀವನಶೈಲಿ, ವೈಯಕ್ತಿಕ ಸ್ವಚ್ಛತೆ, ಪರಿಸರ ನೈರ್ಮಲ್ಯ ಹಾಗೂ ಸಮತೋಲಿತ ಪೌಷ್ಟಿಕ ಆಹಾರದ ಮಹತ್ವದ ಕುರಿತು ಮಾಹಿತಿ ನೀಡಿದರು. ಗರ್ಭಿಣಿಯರು, ಬಾಣಂತಿಯರು ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಹಾಗೂ ಮಕ್ಕಳ ಇರಲಿ .



ಉತ್ತಮ ಪೌಷ್ಟಿಕ ಆಹಾರ ಸೇವನೆಯಿಂದ ಆರೋಗ್ಯ ವೃದ್ಧಿಯಾಗುತ್ತದೆ ಎಂದರು.

ನಂತರ ಮಾತನಾಡಿದ ಜಾಗೃತಿ ಮಹಿಳಾ ಸಂಘಟನೆಯ ದೇವಿಪುತ್ರಪ್ಪ ಅವರು ಪೌಷ್ಟಿಕ ಆಹಾರ ಸೇವನೆಯ ಅಗತ್ಯತೆ, ಅಪೌಷ್ಟಿಕತೆಯನ್ನು ತಡೆಗಟ್ಟುವ ಕ್ರಮಗಳು ಹಾಗೂ ಸಾಂಕ್ರಾಮಿಕ ರೋಗಗಳ ನಿಯಂತ್ರಣದ ಕುರಿತು ವಿವರಿಸಿದರು. ಗ್ರಾಮಸ್ಥರು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಹಾಗೂ ಆರೋಗ್ಯ ಇಲಾಖೆಯ ಸೇವೆಗಳನ್ನು ಸದುಪಯೋಗಪಡಿಸಿಕೊಳ್ಳಿ.

ಗರ್ಭಿಣಿ ಮತ್ತು ಬಾಣಂತಿಯ ಅವಧಿಯಲ್ಲಿ ಉತ್ತಮ ಪೌಷ್ಟಿಕ ಆಹಾರವನ್ನು ಸೇವಿಸಬೇಕು ಬಾಣಂತಿ ಅವಧಿಯಲ್ಲಿ ಉತ್ತಮ ಪೌಷ್ಟಿಕ ಆಹಾರ ಸೇವನೆ ಮಾಡುವುದರಿಂದ ತಾಯಿ ಹಾಲು ವೃದ್ಧಿಯಾಗುತ್ತದೆ ಮಗುವಿಗೆ ಆರು ತಿಂಗಳ ವರೆಗೆ ಎದೆ ಹಾಲು ಮತ್ತು ನಂತರದಲ್ಲಿ ಲಘುವಾದ ಉತ್ತಮ ಪೌಷ್ಟಿಕ ಆಹಾರ ಸೇವನೆ ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ಆರೋಗ್ಯ ನಿರೀಕ್ಷಣಾ ಅಧಿಕಾರಿಗಳು ಮಹೇಶ . ಹಾಗೂ. ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು. ನಿಂಗಮ್ಮ . ಸಮುದಾಯ ಆರೋಗ್ಯ ಅಧಿಕಾರಿಗಳು.ಮೇರಿ ಅಂಗನವಾಡಿ ಕಾರ್ಯಕರ್ತೆಯರಾದ ಎಂ ಗಂಗಮ್ಮ . ಜಮುನಾ .ಮಹಾಬಿ. ಆಶಾ ಕಾರ್ಯಕರ್ತೆ ಹುಲಿಗೆಮ್ಮ ತಾಯಿಂದಿರು ಮತ್ತು ಹಿರಿಯ ನಾಗರಿಕರ ಉಪಸ್ಥಿತರಿದ್ದರು

# ಕಲಾಪ ಸುಗಮವಾಗಿ ನಡೆಯಲು ಪ್ರತಿಪಕ್ಷಗಳ ಸಹಕಾರ ಕೋರಿದ ಸಿಎಂ ಡಿಕೆಶಿ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು; ವಿಧಾನಮಂಡಲದ ಅಧಿವೇಶನದ ಮೊದಲ ದಿನವಾದ ಇಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಂಪುಟದ ಕೆಲ ಸಚಿವರು ವಿರೋಧ ಪಕ್ಷದ ಸದಸ್ಯರ ಬಳಿ ತೆರಳಿ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು, ಕಲಾಪ ಸುಗಮವಾಗಿ ನಡೆಯಲು ಸಹಕಾರ ಕೋರಿದರು.**


ಕಲಾಪ ಆರಂಭಕ್ಕೂ ಮುನ್ನ ಸಭಾಂಗಣದಲ್ಲಿ ಕರೆಗಂಟೆ ಮೊಳಗುತ್ತಿದ್ದಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರ ಆಸನಗಳ ಬಳಿ ತೆರಳಿ ಉಭಯ ಕುಶಲೋಪರಿ ವಿಚಾರಿಸಿದರು. ವಿರೋಧ ಪಕ್ಷದ ಹಲವು ಸದಸ್ಯರೊಂದಿಗೆ ಕೆಲಕಾಲ ಮಾತುಕತೆ ನಡೆಸಿ, ಅಧಿವೇಶನವನ್ನು ಸೌಹಾರ್ದಯುತವಾಗಿ ನಡೆಸಲು ಸಹಕಾರ ನೀಡುವಂತೆ ಮನವಿ ಮಾಡಿದರು.

ವಿರೋಧ ಪಕ್ಷದ ಸದಸ್ಯರ ಜೊತೆ ಮುಖ್ಯಮಂತ್ರಿ ಚರ್ಚೆ ನಡೆಸುತ್ತಿದ್ದ ನಡುವೆ ಕರೆ ಗಂಟೆ ನಿಂತು, ಕಲಾಪ ಅಧಿಕೃತವಾಗಿ ಆರಂಭವಾಯಿತು. ವಂದೇ ಮಾತರಂ ಗೀತೆ ಮೊಳಗಿತ್ತು. ಅದು ನಿಂತ ಬಳಿಕ ಮತ್ತೆ ವಿರೋಧ ಪಕ್ಷದ ಸಾಲಿನತ್ತ ಬಂದ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರಿಗೆ ಹಸ್ತ ಲಾಘವ ನೀಡಿ ಶುಭಾಷಯ ವಿನಿಮಯ ಮಾಡಿಕೊಂಡರು.

ಮುಖ್ಯಮಂತ್ರಿಯಾಗಿ ಮೊದಲ ಅಧಿವೇಶನವನ್ನುಎದುರಿಸುತ್ತಿರುವ ಡಿ.ಕೆ.ಶಿವಕುಮಾರ್ ಅವರು ಆಡಳಿತ ಪಕ್ಷದ ಮೊಗಸಾಲೆಯಿಂದ ಸದನದ ಸಭಾಂಗಣ ಪ್ರವೇಶಿಸುವ ಮುನ್ನ ಸಭಾಂಗಣದ ಬಾಗಿಲಿಗೆ ದೀರ್ಘದಂಡ ನಮಸ್ಕಾರವನ್ನು ಹಾಕಿದರು. ಸಭಾಂಗಣದ ಒಳಗೆ ತಮ ಕುರ್ಚಿಯಲ್ಲಿ ಆಸನರಾಗುವ







ಮುನ್ನ ಮತ್ತೊಮೆ ಮುಂದಿನ ಮೇಜಿಗೆ ಹಣೆ ಮುಟ್ಟಿ ಡಿ.ಕೆ.ಶಿವಕುಮಾರ್ ನಮಸ್ಕರಿಸಿದರು.

ಅದೇ ರೀತಿ ಸಚಿವರಾದ ಕೃಷ್ಣ ಬೈರೇಗೌಡ, ಬಸವರಾಜ ರಾಯರೆಡ್ಡಿ ಸೇರಿದಂತೆ ಹಲವು ಸಚಿವರು ವಿರೋಧ ಪಕ್ಷದ ಸದಸ್ಯರ ಸಾಲಿಗೆ ತೆರಳಿ ಮಾತುಕತೆ ನಡೆಸಿದರು. ಮೊದಲ ದಿನವೇ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡ ದೃಶ್ಯ ಕಂಡುಬಂತು.

ಅತೃಪ್ತ ಶಾಸಕರ ಗೈರುಹಾಜರಿ: ಇದೇ ವೇಳೆ ವಿಧಾನಸಭೆಯ ಕಲಾಪದಲ್ಲಿ ಸಚಿವ ಸ್ಥಾನ ದೊರೆಯದೆ ಅಸಮಾಧಾನಗೊಂಡಿರುವ ಹಲವು ಶಾಸಕರ ಗೈರುಹಾಜರಿ ಎದ್ದು ಕಾಣಿಸಿತು. ಎಸ್.ಎನ್. ನಾರಾಯಣಸ್ವಾಮಿ, ಯಶವಂತರಾಯಗೌಡ ಪಾಟೀಲ್, ಅಪ್ಪಾಜಿ ನಾಡಗೌಡ, ಬಿ.ಆರ್. ಪಾಟೀಲ್, ಪ್ರಿಯಕೃಷ್ಣ, ಎಂ. ಕೃಷ್ಣಪ್ಪ ಸೇರಿದಂತೆ ಹಲವು ಶಾಸಕರು ಕಲಾಪಕ್ಕೆ ಗೈರಾಗಿದ್ದರು. ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದ ನಾಯಕರ ಗೈರುಹಾಜರಿ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಯಿತು.

ಸಚಿವರ ಆಸನದಲ್ಲೂ ಬದಲಾವಣೆ: ಈ ಬಾರಿ ವಿಧಾನಸಭೆಯಲ್ಲಿನ ಸಚಿವರ ಆಸನ ವ್ಯವಸ್ಥೆಯಲ್ಲೂ ಬದಲಾವಣೆ ಕಂಡುಬಂದಿದೆ. ಕೃಷ್ಣ ಬೈರೇಗೌಡ ಅವರು ಆಡಳಿತ ಪಕ್ಷದ ಸಚಿವರ ಮೊದಲ ಸಾಲಿನ ಟ್ರಜರಿ ಬೆಂಚ್ ನಲ್ಲಿ ಆಸನ ಪಡೆದಿದ್ದಾರೆ. ಈ ಹಿಂದೆ ಸಂಸದೀಯ ವ್ಯವಹಾರಗಳ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಕೃಷ್ಣ ಬೈರೇಗೌಡ ಅವರು ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಸಚಿವರಾಗಿದ್ದಾರೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಳಿಯಿದ್ದು, ಈ ಜವಾಬ್ದಾರಿಯನ್ನು ಬಹುತೇಕ ಕೃಷ್ಣ ಬೈರೇಗೌಡ ಅವರೇ ನಿರ್ವಹಿಸಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಸಚಿವರ ಸಾಲಿನಲ್ಲಿ ಎಡದಿಂದ ಬಲಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್, ಹಿರಿಯ ಸಚಿವರಾದ ಕೆ.ಎಚ್.ಮುನಿಯಪ್ಪ, ರಾಮಲಿಂಗಾರೆಡ್ಡಿ, ಬಸವರಾಜ ರಾಯರೆಡ್ಡಿ, ಕೃಷ್ಣ ಬೈರೇಗೌಡ ಹಾಗೂ ಲಕ್ಷ್ಮಣ ಸವದಿ ಅವರು ಆಸನ ಪಡೆದಿದ್ದರು. ಕಳೆದ ಅಧಿವೇಶನದಲ್ಲಿ ವಿಧಾನಸಭೆ ಅಧ್ಯಕ್ಷರಾಗಿ ಕೇಂದ್ರ ಪೀಠದಲ್ಲಿ ಕುಳಿತಿದ್ದ ಯು.ಟಿ.ಖಾದರ್ ಅವರು ಇದೀಗ ಸಚಿವರಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರ ಹಿಂಬದಿಯ ಸಾಲಿನಲ್ಲಿ ಅವರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ.

ಹೊಸ ಸಚಿವರಿಗೆ ಮೊದಲ ಅಧಿವೇಶನ: ಸಿದ್ದರಾಮಯ್ಯ ಅವರಿಂದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರಕ್ಕೆ ಇದು ಪ್ರಮುಖ ಮೊದಲ ವಿಧಾನಮಂಡಲ ಅಧಿವೇಶನವಾಗಿದೆ. ಜೂನ್ 3ರಂದು ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕ–ರಿಸಿದ ಬಳಿಕ ಸಂಪುಟ ವಿಸ್ತರಣೆ ನಡೆದಿದೆ.

ಆಗಸ್ಟ್ 3ರಂದು ನಡೆದ ಎರಡನೇ ಸಂಪುಟ ವಿಸ್ತರಣೆಯಲ್ಲಿ ಹಲವು ಮಂದಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಮೊದಲ ಹಂತದಲ್ಲಿ ಮುಖ್ಯಮಂತ್ರಿ ಸೇರಿದಂತೆ 14 ಮಂದಿ ಸಂಪುಟಕ್ಕೆ ಸೇರ್ಪಡೆಯಾಗಿದ್ದರು. ಬಳಿಕ ಎರಡನೇ ಹಂತದಲ್ಲಿ 19 ಮಂದಿ ಸಚಿವರಾಗಿ ಪ್ರಮಾಣವಚನ ಸ್ವೀಕ–ರಿಸಿದ್ದರು. ಮೊದಲ ಹಂತದಲ್ಲಿ ಸಚಿವರಾದ ಎಲ್ಲ–ರಿಗೂ ಖಾತೆ ಹಂಚಿಕೆ ಮಾಡಲಾಗಿದ್ದು, ಎರಡನೇ ಹಂತದಲ್ಲಿ ಸಚಿವರಾದ 19 ಮಂದಿಯಲ್ಲಿ 13 ಮಂದಿಗೆ ಖಾತೆ ಹಂಚಿಕೆಯಾಗಿದೆ. ಇನ್ನೂ ಆರು ಮಂದಿ ಖಾತೆ ರಹಿತ ಸಚಿವರಾಗಿ ವಿಧಾನಮಂಡಲದ ಅಧಿವೇಶನದಲ್ಲಿ ಭಾಗವಹಿಸುತ್ತಿದ್ದಾರೆ.

ಹಲವು ಸಚಿವರಿಗೆ ಹೊಸ ಅನುಭವ: ಹೊಸ ಸಂಪುಟದ ಹಲವು ಸಚಿವರಿಗೆ ಇದು ಮೊದಲ ವಿಧಾನಮಂಡಲ ಅಧಿವೇಶನವಾಗಿದೆ. ಜಮೀರ್ ಅಹಮದ್ ಖಾನ್, ರಾಮಲಿಂಗಾರೆಡ್ಡಿ, ಕೆ.ಎಚ್.ಮುನಿಯಪ್ಪ, ಲಕ್ಷ್ಮಣ್ ಸವದಿ, ಶಿವರಾಜ್ ತಂಗಡಗಿ, ಯು.ಟಿ.ಖಾದರ್, ಚೆಲುವರಾಯಸ್ವಾಮಿ, ಮಧು ಬಂಗಾರಪ್ಪ, ಬಸವರಾಜ ರಾಯರೆಡ್ಡಿ, ಪುಟ್ಟರಂಗಶೆಟ್ಟಿ, ಸಂತೋಷ್ ಲಾಡ್, ಎಸ್.ಎಸ್. ಮಲ್ಲಿಕಾರ್ಜುನ್, ಪಿ.ಎಂ.ನರೇಂದ್ರಸ್ವಾಮಿ ಹಾಗೂ ಬಿ.ನಾಗೇಂದ್ರ ಸೇರಿದಂತೆ ಹಲವರು ಈ ಹಿಂದೆ ಸಚಿವರಾಗಿ ವಿಧಾನಮಂಡಲದ ಕಲಾಪವನ್ನು ನಿರ್ವಹಿಸಿದ ಅನುಭವ ಹೊಂದಿದ್ದಾರೆ.

ಇನ್ನು ರುದ್ರಪ್ಪ ಲಮಾಣಿ, ಟಿ. ರಘುಮೂರ್ತಿ, ಅಜಯ್ ಸಿಂಗ್, ಕೆ.ಎಂ. ಶಿವಲಿಂಗೇಗೌಡ, ವಿಜಯಾನಂದ ಕಾಶಪ್ಪನವರ್, ಕೆ.ಎಸ್. ಬಸಂತಪ್ಪ, ರಿಜ್ವಾನ್ ಅರ್ಷದ್ ಹಾಗೂ ಎಚ್.ಸಿ.ಬಾಲಕೃಷ್ಣ ಸೇರಿದಂತೆ ಕೆಲವರಿಗೆ ಸಚಿವರಾಗಿ ಇದು ಮೊದಲ ವಿಧಾನಮಂಡಲ ಅಧಿವೇಶನವಾಗಿದೆ.

ಪ್ರತಿಪಕ್ಷದ ವಾಗ್ದಾಳಿಗೆ ಸಜ್ಜು: ಖಾತೆಗಳ ಹಂಚಿಕೆ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಸಚಿವರು ತಮ ಇಲಾಖೆಗಳ ವಿಚಾರದಲ್ಲಿ ಪ್ರತಿಪಕ್ಷಗಳ ಪ್ರಶ್ನೆ ಹಾಗೂ ವಾಗ್ದಾಳಿಯನ್ನು ಎದುರಿಸಲು ಪೂರ್ವ ತಯಾರಿ ನಡೆಸಿದ್ದಾರೆ. ಖಾತೆ ರಹಿತ ಸಚಿವರೂ ಕೂಡ ಸರ್ಕಾರದ ಪರವಾಗಿ ಸದನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಿದ್ಧತೆ ಮಾಡಿಕೊಂಡಿದ್ದಾರೆ. ಒಟ್ಟಾರೆ, ಅಧಿವೇಶನದ ಮೊದಲ ದಿನ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಸೌಹಾರ್ದ ವಾತಾವರಣ ನಿರ್ಮಿಸುವ ಪ್ರಯತ್ನ ನಡೆಸಿದರೆ, ಸಚಿವ ಸ್ಥಾನ ವಂಚಿತ ಶಾಸಕರ ಗೈರುಹಾಜರಿ ಹಾಗೂ ಸಚಿವರ ಆಸನ ವ್ಯಯವಸ್ಥೆಯಲ್ಲಿನ ಬದಲಾವಣೆಗಳು ರಾಜಕೀಯ ವಲಯದಲ್ಲಿ ಗಮನ ಸೆಳೆದವು.

## ವಚನ ದರ್ಶನ

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ
ಜಂಗಮದಾಸೋಹಕ್ಕೆಂದು ನಾನಾವಾವ ಕರ್ಮಂಗಳ
ಮಾಡಿದಡೆಯು ಆ ಕರ್ಮಫಲಭೋಗವ ನೀ ಕೊಡುವೆ
ಎಂಬುದ ನಾನು ಬಲ್ಲೆನು. ನೀ ಕೊಟ್ಟ ದ್ರವ್ಯವ ನಿಮಗಲ್ಲದೆ
ಮತ್ತೊಂದಕ್ಕೆ ಮಾಡೆನು ನಿಮ್ಮ ಸೊಮ್ಮಿಂಗೆ ಸಲಿಸುವೆನು.
ನಿಮ್ಮಾಣೆ ಕೂಡಲಸಂಗಮದೇವಾ

ವಿಶ್ವಗುರು ಶ್ರೀ ಬಸವಣ್ಣನವರ ಪ್ರಸಿದ್ಧ ವಚನ "ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು" ಎಂಬುದರ ಸಾಲಾಗಿದೆ. ಇದರ ಅರ್ಥ ಕಾಯಕವೇ ಕೈಲಾಸ ಎಂಬ ತತ್ತ್ವವಾಗಿದ್ದು, ಮಾಡುವ ಪ್ರತಿಯೊಂದು ಕೆಲಸವನ್ನು ದೇವರ ಪೂಜೆಯಂತೆ ಭಾವಿಸಬೇಕು ಎಂದು ಇದು ತಿಳಿಸುತ್ತದೆ. ಆರಂಭ ಮಾಡುವೆ ಎನ್ನುವುದು ಅದುಕೃಷಿ ಕಾಯಕವಾಗಿರಲಿ ಅಥವಾ ಯಾವುದೇ ಉದ್ಯೋಗವಿರಲಿ ಕಾಯಕ ವ್ಯವಹಾರ ವ್ಯಾಪಾರ ಇನ್ನೂ ಅನೇಕ ರೀತಿಯಲ್ಲಿ ಮಾಡುವ ಕಾಯಕವು ಸಹ ಈ ಕಾರ್ಯಕ್ಕೆ ಮೂಲ ಅಡಿಪಾಯ ಎನ್ನಬಹುದು.

ವಾಣಿಜ್ಯಪರಸೇವೆ ಸೇವಾ ಮನೋಭಾವದ ನೌಕರಿಇವುಗಳನ್ನು ಗುರು, ಲಿಂಗ ಮತ್ತು ಜಂಗಮರ ಅರ್ಪಣೆಯೆಂದು ಭಾವಿಸಿ ಪ್ರಾಮಾಣಿಕವಾಗಿ ಮಾಡಬೇಕು.

ಈ ವಚನದಲ್ಲಿ ಬಸವಣ್ಣನವರು ಕಾಯಕದ ಬಗ್ಗೆ ಹೇಳುತ್ತಿದ್ದಾರೆ. ಅವರು ಕಾಯಕವನ್ನು ಹೇಗೆ ಮಾಡುತ್ತಾರೆ ಎಂಬುದನ್ನು ವಿವರಿಸುತ್ತಿದ್ದಾರೆ. ಅವರು ಯಾವುದೇ ಕೆಲಸ ಮಾಡಿದರೂ ಅದು ಕೂಡಲಸಂಗಮನಿಗಾಗಿಯೇ ಎಂದು ಹೇಳುತ್ತಾರೆ. ಅವರು ಕೃಷಿಯ ಕೆಲಸಮಾಡಬಹುದು, ವ್ಯವಹಾರ, ವ್ಯಾಪಾರವನ್ನು ಮಾಡಬಹುದು ಅಥವಾ ಇತರರ ಸೇವೆಮಾಡಬಹುದು, ಅವೆಲ್ಲವು ಗುರು, ಲಿಂಗ ಜಂಗಮ ದಾಸೋಹಕ್ಕೆ. ಅವರು ಯಾವುದೇ ಕೆಲಸಮಾಡಿದರೂ ಅದರ ಫಲ ಕೂಡಲಸಂಗಮನು ಕೊಟ್ಟೇ ಕೊಡುತ್ತಾನೆ ಎಂಬುದು ಅವರಿಗೆ ತಿಳಿದಿದೆ. ಆ ಕೆಲಸಕ್ಕೆ ದೊರೆತ ಪ್ರತಿಫಲವನ್ನು ಆ ಸಂಗಮನಿಗಲ್ಲದೆ ಅಥವಾ ಆತನಿಗೆ ಸಂಬಂಧ ಪಟ್ಟ ಕೆಲಸಗಳಿಗಲ್ಲದೆ ಬೇರೆಯದಕ್ಕೆ ಸಲ್ಲಿಸೆನು ಎಂದು ಆಣೆಮಾಡಿ ಹೇಳುತ್ತಾರೆ.

ನಮಗೆ ತಿಳಿದಂತೆ ಬಸವಣ್ಣನವರು ಕೃಷಿಯ ಕೆಲಸ ಮಾಡಿದವರಲ್ಲ. ಆದರೂ ಅವರು ಇಲ್ಲಿ ''ಆರಂಬವ ಮಾಡುವೆನು'' ಎಂದು ಹೇಳುತ್ತಿದ್ದಾರೆ. ಇಲ್ಲಿ ಅದನ್ನು ಉದಾಹರಣೆಯ ರೂಪದಲ್ಲಿ ಹೇಳುತ್ತಿದ್ದಾರೆ. ತಾವು ಯಾವುದೇ ಕೆಲಸ, ದುಡಿತ, ವ್ಯಾಪಾರ ಅಥವಾ ಇನ್ನಾರದೋ ಸೇವೆ ಮಾಡಿದರೂ ಅದು ಗುರು, ಲಿಂಗ, ಜಂಗಮಕ್ಕಾಗಿಯೇ ಮಾಡುತ್ತಾರಲ್ಲದೆ ಬೇರಾವುದಕ್ಕೂ ಅಲ್ಲ, ಎನ್ನುತ್ತಾರೆ. ದಿನನಿತ್ಯದ ಬದುಕಿನ ತೊಳಲಾಟದಿಂದ ಬೇಸತ್ತ ಶಿಷ್ಯನನ್ನು ಅವುಗಳಿಂದ ಬಿಡಿಸಿ ಶಿವಮಾರ್ಗವನ್ನು ತೋರಿಸುವವನೇ ಗುರು.

ಇಂತಹ ಗುರುವನ್ನು ಮರೆತು ಕೇವಲ ತನ್ನ ಸ್ವಾರ್ಥಕ್ಕಾಗಿ ದುಡಿಯುವುದು ಸರಿಯೆ? ಪರಮ ಕಾರುಣ್ಯದ ಮೂರ್ತಿಯಾದ ಗುರುವಿಗಾಗಿ ದುಡಿಯುವುದು ಸಾರ್ಥಕವಾದದ್ದು. ಆ ಗುರುವಿನ ಬಗ್ಗೆ ಅಪಾರವಾದ ಗೌರವವಿರುದರಿಂದಲೇ ಬಸವಣ್ಣನವರು ತಾನು ದುಡಿಯುವುದು ಗುರುವಿಗಾಗಿ ಎಂದು ಹೇಳುತ್ತಾರೆ. ಸದಾ ಗುರುವಿನ ಉದಾರ ಗುಣವನ್ನು ನೆನೆಯುತ್ತಲೆ ಇರುವುದರಿಂದ ಅವರ ಕೆಲಸವೆಲ್ಲವೂ ಗುರುವಿನ ಪೂಜೆಯೇ ಎನಿಸುತ್ತದೆ. ಲಿಂಗವೆಂದರೆ ಬ್ರಹ್ಮಾಂಡ ಮತ್ತು ಪಿಂಡಾಂಡಗಳ ಐಕ್ಯ. ಏನು ಹಾಗೆಂದರೆ? ಬ್ರಹ್ಮಾಂಡವೆಂದರೆ ವಿಶ್ವ. ಪಿಂಡಾಂಡವೆಂದರೆ ಜೀವ. ಬ್ರಹ್ಮಾಂಡದಲ್ಲಿ ಇರುವುದೆಲ್ಲವೂ ಪಿಂಡಾಂಡದಲ್ಲಿಯೂ ಇದೆ ಎಂದು ಹೇಳುತ್ತಾರೆ. ಆದರೆ ನಾವು ಅಜ್ಞಾನದಲ್ಲಿ ಮುಳುಗಿರುವುದರಿಂದ ಅದನ್ನು ಗುರುತಿಸದೆ ಜೀವ ಬೇರೆ, ವಿಶ್ವ ಬೇರೆ ಎಂದುಕೊಳ್ಳುತ್ತೇವೆ. ಜೀವ ಮತ್ತು ವಿಶ್ವದ ಐಕ್ಯ ರೂಪವೇ ಲಿಂಗ. ಈ ಅರಿವು ಮೂಡಿದಾಗ ನಮ್ಮಲ್ಲಿರುವ ಎಲ್ಲ ವೈರುಧ್ಯಗಳು ಇಲ್ಲವಾಗುತ್ತವೆ ಎನ್ನುತ್ತಾರೆ. ಅಂತಹ ಅರಿವಿನಲ್ಲಿರುವವನು ಮಾಡುವುದೆಲ್ಲವೂ ಆ ಲಿಂಗಕ್ಕಾಗಿಯೇ ಹೊರತು ಮತ್ತೊಂದಕ್ಕಲ್ಲ. ಸದಾ ಆ ಅರಿವು ಮತ್ತು ಆ ಅರಿವನ್ನು ಉಂಟುಮಾಡಿದ ಗುರುವನ್ನು ನೆನೆಯುತ್ತಿರುವುದರಿಂದ ತಾನು ಮಾಡಿದ ಕೆಲಸವೆಲ್ಲವು ಗುರು ಮತ್ತು ಲಿಂಗದ ಪೂಜೆಯೇ ಆಗುತ್ತದೆ, ಎಂದು ಹೇಳುತ್ತಾರೆ ಬಸವಣ್ಣನವರು.

ಗುರುವಿನ ಉದಾರತೆ , ಲಿಂಗದ ಅರಿವು, ಇಡೀ ಜೀವರಾಶಿಯ ಬಗ್ಗೆ ಕಾಳಜಿ ಮತ್ತು ಎಲ್ಲರನ್ನೂ ಮೇಲೆತ್ತುವುದರಲ್ಲಿ ತೊಡಗಿಸಿಕೊಂಡ ಕ್ರಿಯಾಶೀಲತೆಯ ಮೇಳವೇ ಜಂಗಮ. ಇಂತಹ ಜಂಗಮನನ್ನು ಮರೆಯಲು ಸಾಧ್ಯವೇ? ಇಲ್ಲವೇ ಇಲ್ಲ. ಬಸವಣ್ಣನವರು ಮಾಡುವ ಪ್ರತಿ ಕೆಲಸವೂ ಜಂಗಮನ ಗುಣದ ನೆನೆಹಿನಲ್ಲಿಯೇ ನಡೆಯುವುದರಿಂದ ಅದು ಜಂಗಮನ ಪೂಜೆಯೇ ಆಗುತ್ತದೆ. ಈ ವಚನದಂತೆ ನಾವುಗಳು ನಡೆ ನುಡಿಗಳೊಂದಿಗೆ ಬಾಳೋಣ ಬದುಕೋಣ. ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ
ಸಿಂಧನೂರು. 9980094144

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಶ್ರೀ ವೆಂಕಟೇಶ್ವರ ಪದವಿ ಮಹಾವಿದ್ಯಾಲಯ ವತಿಯಿಂದ ಬಿ ಎ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಬಿ ಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ

❑ ನೈಜ್ಯ ದೆಸೆ ನ್ಯೂಸ್



ಮಾನ್ವಿ: ಪಟ್ಟಣದ ಶ್ರೀ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಶ್ರೀ ವೇಂಕಟೇಶ್ವರ ಪದವಿ ಮಹಾವಿದ್ಯಾಲಯ ಮಾನ್ವಿ ವತಿಯಿಂದ ಬಿ ಎ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮವನ್ನು ಶ್ರೀ ವೇಂಕಟೇಶ್ವರ ಪದವಿ ಮಹಾವಿದ್ಯಾಲಯ ಅಧ್ಯಕ್ಷರಾದ ಮಹಾಂತೇಶ ಓಲೇಕಾರ ಉದ್ಘಾಟಿಸಿ ಮಾತನಾಡಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಕಾಲೇಜನ್ನು ಪ್ರಾರಂಭಿಸಲಾಗಿದ್ದು ವಿದ್ಯಾರ್ಥಿಗಳು ಕಾಲೇಜಿನಲ್ಲಿ ಉಪನ್ಯಾಸಕರು ಭೋದಿಸುವ ವಿಷಯಗಳನ್ನು ತಿಳಿದುಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಆಂಜನೇಯ ನಸಲಾಪುರ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಕೇವಲ ಅಂಕಗಳಿಸುವುದಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಹಾಗೂ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳುವುದಕ್ಕೆ ಹಾಗೂ ಉನ್ನತ ಜೀವನವನ್ನು ಕಟ್ಟಿಕೊಳ್ಳುವುದಕ್ಕೆ ಬಳಸಿಕೊಳ್ಳಬೇಕು ಎಂದು ತಿಳಿಸಿದರು. ಅಬ್ದುಲ್ ಹಸನ್ ರಾಜ್ಯಶಾಸ್ತ್ರ ಹಿರಿಯ ಉಪನ್ಯಾಸಕರು ಮಾತನಾಡಿ ಕಲಿಕೆಗೆ ಹಾಗೂ ಉತ್ತಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಎಂದಿಗೂ ಕೂಡ ಬಡತನ ಕಾರಣವಾಗುವುದಿಲ್ಲ ಕಠಿಣ ಪರಿಶ್ರಮ ನಿರಂತರ ಕಲಿಕೆಯಿಂದ ಮಾತ್ರ ಸಾಧ್ಯವಾಗುತ್ತದೆ ಆದ್ದರಿಂದ ಪ್ರತಿ ವಿದ್ಯಾರ್ಥಿ ಕೂಡ ಉನ್ನತವಾದ ಗುರಿಯನ್ನು ಜೀವನದಲ್ಲಿ ಹೊಂದಿ ಗುರಿಯನ್ನು ತಲುಪುವುದಕ್ಕೆ ಪ್ರಮಾಣಿಕವಾಗಿ ಶ್ರಮಿಸಿದಾಗ ಮಾತ್ರ ಯಶಸ್ಸು ದೊರೆಯುತ್ತದೆ ಎಂದು ತಿಳಿಸಿದರು

ಕಾ.ನಿ.ಪ.ಸಂಘದಿಂದ ಜಿಲ್ಲಾ ಉತ್ತಮ ವರದಿಗಾರರಾಗಿ ಸನ್ಮಾನಿತರಾದ ಹಿರಿಯ ವರದಿಗಾರರು ಈಶಪ್ಪ ಬೈಲ್ ಮರ್ಚೆಡ್ ಹಾಗೂ ರಾಜಶೇಖರ ಹೆಚ್ ರವರನ್ನು ಕಾಲೇಜ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಕಾಲೇಜಿನ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಕಾರ್ಯಕ್ರಮದಲ್ಲಿ ಬಾಲಕಿಯರ ಸ ಪ ಪೂ ಕಾಲೀಜಿನ ಪ್ರಾಚಾರ್ಯರಾದ ಸೈಯದ್ ಮುಜೀಬ್ ಅಹ್ಮದ್ ಶ್ರೀ ವೆಂಕಟೇಶ್ವರ ಫ್ರೌಢಶಾಲೆ ಆಢಳಿತಾಧಿಕಾರಿ ಶಂಕರಪ್ಪ ನಕ್ಕುಂದಿ ಮುಖ್ಯಗುರು ಚಂದ್ರಶೇಖರ ಪಾಟೀಲ್ ಡಾ.ಹುಲಿಯಪ್ಪ ದುಮತಿ ಅಂಬಣ್ಣ ನಾಯಕ ಶರಣಬಸವ ಬಂದೇನವಾಜ್ ಆಫ್ರಿನ ಬೇಗಂ, ಸಂತೋಷಕುಮಾರ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸಂಸತ್ತಿನಲ್ಲಿ ಪ್ರತಿಧ್ವನಿಸಿದ ಉತ್ತರಾಖಂಡದ ಶುದ್ಧೀಕರಣ ವಿವಾದ

❑ ನೈಜ್ಯ ದೆಸೆ ನ್ಯೂಸ್





**ನವದೆಹಲಿ: ಉತ್ತರಾಖಂಡದ ಹಲ್ದ್ವಾನಿಯ ರಾಮ್ ಲೀಲಾ ಮೈದಾನದಲ್ಲಿ ನಡೆದ ವಿವಾದಾತ್ಮಕ ಶುದ್ಧೀಕರಣ ಸಮಾರಂಭದ ವಿಷಯವು ಸಂಸತ್ತಿನಲ್ಲಿ ತೀವ್ರ ಕೋಲಾಹಲಕ್ಕೆ ಕಾರಣವಾಗಿದೆ. ಕಾಂಗ್ರೆಸ್ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ದಲಿತ ಸಮುದಾಯಕ್ಕೆ ಸೇರಿರುವುದರಿಂದ ಹಾಗೂ ಅವರು ಸಾರ್ವಜನಿಕ ರ್ಯಾಲಿಯಲ್ಲಿ ಮಾತನಾಡಿದ ಸ್ಥಳದಲ್ಲಿ ಈ ಆಚರಣೆ ನಡೆದಿರುವುದು ದೇಶಾದ್ಯಂತ ರಾಜಕೀಯ ವಿವಾದವನ್ನು ಸೃಷ್ಟಿಸಿದೆ.**

ಆಗಸ್ಟ್ 8ರಂದು ಹಲ್ದ್ವಾನಿಯಲ್ಲಿ ನಡೆದ ರ್ಯಾಲಿಯಲ್ಲಿ ಖರ್ಗೆ ಅವರು ಭಾಷಣ ಮಾಡಿದ್ದ ವೇದಿಕೆಯನ್ನು ಬಲಪಂಥೀಯ ಸಂಘಟನೆಯೊಂದು ಟಿಹವನಟಿ ಮಾಡುವ ಮೂಲಕ ಶುದ್ಧೀಕರಣ ಗೊಳಿಸಿದೆ ಎಂದು ಖರ್ಗೆ ಸಂಸತ್ತಿನಲ್ಲಿ ಆರೋಪಿಸಿದರು. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಯ ಬಗ್ಗೆ ಅವರು ಕಳಳವಳ ವ್ಯಕ್ತಪಡಿಸಿದರು. ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರು ಈ ಘಟನೆಯನ್ನು ದುರದೃಷ್ಟಕರ ಎಂದು ಕರೆದಿದ್ದು, ಬಿಜೆಪಿ ಇಂತಹ ಚಟುವಟಿಕೆಗಳಿಗೆ ಎಂದಿಗೂ ಬೆಂಬಲ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಅಲ್ಲದೆ, ಈ ಘಟನೆಯ ಕುರಿತು ಸಂಪೂರ್ಣ ತನಿಖೆ ನಡೆಸಲಾಗುವುದು ಎಂದು ಭರವಸೆ ನೀಡಿದರು. ವಿಶ್ವದಲ್ಲಿ ಅಸ್ಪೃಶ್ಯತೆಗಿಂತ ದೊಡ್ಡ ಪಾಪವಿಲ್ಲ ಎಂದು ಹೇಳಿದ ಸಭಾಪತಿಗಳು, ಇಂತಹ ಕೃತ್ಯಗಳನ್ನು ಎಸಗಿರುವವರ ವಿರುದ್ಧ ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಉತ್ತರಾಖಂಡ ಕಾಂಗ್ರೆಸ್ ಮುಖ್ಯಸ್ಥ ಗಣೇಶ್ ಗೋಡಿಯಾಲ್ ಅವರು ಈ ಕೃತ್ಯದ ಹಿಂದೆ ಬಿಜೆಪಿಯೊಂದಿಗೆ ನಂಟಿರುವ ಶ್ರೀರಾಮ ಸೇನಾ ಗುಂಪು ಇದೆ ಎಂದು ಆರೋಪಿಸಿದ್ದು, ಬಿಜೆಪಿ ಸಮಾಜದಲ್ಲಿ ಜಾತಿ ವಿಭಜನೆ ಮಾಡುತ್ತಿದೆ ಎಂದು ಕಿಡಿಕಾರಿದ್ದಾರೆ. ಆದರೆ ಬಿಜೆಪಿ ಈ ಎಲ್ಲಾ ಆರೋಪಗಳನ್ನು ತಳ್ಳಿಹಾಕಿದೆ.

ಈ ಘಟನೆಯು ಸಾಮಾಜಿಕ ಜಾಲತಾಣಗಳಲ್ಲಿಯೂ ವೈರಲ್ ಆಗಿದ್ದು, ದಲಿತ ನಾಯಕರೊಬ್ಬರು ಭಾಗವಹಿಸಿದ ಸ್ಥಳದಲ್ಲಿ ಇಂತಹ ಶುದ್ಧೀಕರಣ ಕಾರ್ಯಕ್ರಮ ನಡೆಸಿರುವುದು ರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

# ಲೋಕಸಭೆ ಅನಿರ್ದಿಷ್ಟಾವಧಿಗೆ ಮುಂದೂಡಿಕೆ : ಚರ್ಚೆಗಳಿಲ್ಲದೆ ಮುಂಗಾರು ಅಧಿವೇಶನಕ್ಕೆ ತೆರೆ



❑ ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಪ್ರತಿಭಟನಾನಿರತ ವಿದ್ಯಾರ್ಥಿಗಳ ಮೇಲಿನ ಪೊಲೀಸ್ ಕ್ರಮ ಹಾಗೂ ಅಯೋಧ್ಯೆಯ ರಾಮಮಂದಿರ ದೇಣಿಗೆಯ ಕಳ್ಳತನದ ಆರೋಪಗಳ ಕುರಿತು ವಿರೋಧ ಪಕ್ಷಗಳ ಗದ್ದಲ ಹಾಗೂ ಚರ್ಚೆಯಿಲ್ಲದೆ ಪ್ರಮುಖ ಮಸೂದೆಗಳ ಅಂಗೀಕಾರಕ್ಕೆ ಸಾಕ್ಷಿಯಾದ ಕೋಲಾಹಲಕಾರಿ ಮುಂಗಾರು ಅಧಿವೇಶನಕ್ಕೆ ತೆರೆ ಎಳೆಯುತ್ತಾ, ಲೋಕಸಭೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.**

ಸದನವು ದಿನದ ಕಲಾಪಕ್ಕಾಗಿ ಸೇರಿದ ತಕ್ಷಣ, ರಾಷ್ಟ್ರಗೀತೆಯ ಎಲ್ಲಾ ಆರು ಚರಣಗಳನ್ನು ನುಡಿಸಲಾಯಿತು. ನಂತರ ಸ್ಪೀಕರ್ ಓಂ ಬಿರ್ಲಾ ಅವರು ಸದನವನ್ನು ಅನಿರ್ದಿಷ್ಟಾವಧಿಗೆ (ನಿರ್ದಿಷ್ಟ ಅವಧಿಯಿಲ್ಲದೆ) ಮುಂದೂಡಿದರು. ಅಧಿವೇಶನದ ಅವಧಿಯಲ್ಲಿ ಲೋಕಸಭೆಯ ಕಾರ್ಯಕ್ಷಮತೆ ಮತ್ತು ಉತ್ಪಾದಕತೆಯನ್ನು ಎತ್ತಿ ತೋರಿಸುವ ವಾಡಿಕೆಯ ಸಮಾರೋಪ ಭಾಷಣವನ್ನು ಸ್ಪೀಕರ್ ಬಿರ್ಲಾ ಈ ಬಾರಿ ಓದಲಿಲ್ಲ. ಸದನವು ಅಲ್ಪಕಾಲದವರೆಗೆ ಸೇರಿದಾಗ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉಪಸ್ಥಿತರಿದ್ದರು.


ಅಧಿವೇಶನದ ಪೂರ್ತಿ ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ತೀವ್ರ ಘೋಷಣೆಗಳನ್ನು ಕೂಗಿದವು. ಚರ್ಚೆಯಲ್ಲಿ ಭಾಗವಹಿಸುವಂತೆ ಸ್ಪೀಕರ್ ಬಿರ್ಲಾ ಅವರು ವಿರೋಧ ಪಕ್ಷದ ಸದಸ್ಯರಿಗೆ ಪದೇ ಪದೇ ಮನವಿ ಮಾಡಿದರು. ಆದರೂ ಪಟ್ಟುಬಿಡದ ವಿರೋಧ ಪಕ್ಷಗಳು ತಮ ಪ್ರತಿಭಟನೆಯನ್ನು ಮುಂದುವರಿಸಿದ ಕಾರಣ, ಸದನವನ್ನು ಪದೇ ಪದೇ ಮುಂದೂಡಬೇಕಾಯಿತು.

ಜು.20ರಂದು ಪ್ರಾರಂಭವಾದ ಈ ಮುಂಗಾರು ಅಧಿವೇಶನವು ಪ್ರಮುಖವಾಗಿ ಎರಡು ವಿಚಾರಗಳ ಕೇಂದ್ರವಾಗಿತ್ತು. ಜು.20 ರಂದು ಜಂತರ್ ಮಂತರ್‌ನಲ್ಲಿ ನೀಟ್ ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ ವಿರುದ್ಧ ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿ ಹೊಣೆಗಾರಿಕೆಯನ್ನು ಕೋರಿ ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ನಡೆದ ಪೊಲೀಸ್ ಕ್ರಮದ ಕುರಿತು ಗೃಹ ಸಚಿವ ಅಮಿತ್ ಶಾ ಅವರಿಂದ ಪ್ರತಿಕ್ರಿಯೆಯನ್ನು ವಿರೋಧ ಪಕ್ಷಗಳು ಆಗ್ರಹಿಸಿದವು.

ಅಯೋಧ್ಯೆಯ ರಾಮ ಮಂದಿರದಲ್ಲಿ ದೇಣಿಗೆ ಕಳ್ಳತನದ ಆರೋಪಗಳ ಕುರಿತು ಸದನದಲ್ಲಿ ತೀವ್ರ ಚರ್ಚೆಗೆ ಪಟ್ಟುಹಿಡಿಯಲಾಯಿತು.ವಿರೋಧ ಪಕ್ಷಗಳ ಪ್ರತಿಭಟನೆಗೆ ಪ್ರತಿಕ್ರಿಯಿಸಿದ್ದ ಗೃಹ ಸಚಿವ ಅಮಿತ್ ಶಾ, ಚರ್ಚೆಗೆ ತಾವು ಸಂಪೂರ್ಣ ಸಿದ್ಧವಿರುವುದಾಗಿ ಮತ್ತು ವಿರೋಧ ಪಕ್ಷಗಳು ಎತ್ತಿದ ಪ್ರತಿಯೊಂದು ಪ್ರಶ್ನೆಗೂ ಉತ್ತರಿಸುವುದಾಗಿ ಸ್ಪಷ್ಟಪಡಿಸಿದ್ದರು. ಅಲ್ಲದೆ, ವಿದ್ಯಾರ್ಥಿಗಳ ವಿಷಯದ ಕುರಿತು ಚರ್ಚೆಯನ್ನು ಪ್ರಾರಂಭಿಸಲು ವಿರೋಧ ಪಕ್ಷಗಳೊಂದಿಗೆ ಸಮಾಲೋಚಿಸಿ ಸೂಕ್ತ ಸಮಯ ನಿಗದಿಪಡಿಸುವಂತೆ ಸ್ಪೀಕರ್ ಅವರಿಗೆ ಮನವಿ ಮಾಡಿದ್ದರು. ಆದರೆ ಪ್ರತಿಭಟನೆಯ ತೀವ್ರತೆಯಿಂದಾಗಿ ಯಾವುದೇ ಸಾರ್ಥಕ ಚರ್ಚೆ ನಡೆಯದೆ ಅಧಿವೇಶನ ಮುಕ್ತಾಯಗೊಂಡಿತು.

# ಎನ್‌ಡಿಎ ಮೈತ್ರಿಕೂಟ ಸೇರುತ್ತಾ ಶರದ್ ಪವಾರ್ ನೇತೃತ್ವದ ಎನ್‌ಸಿಪಿ–ಎಸ್‌ಪಿ..

❑ ನೈಜ್ಯ ದೆಸೆ ನ್ಯೂಸ್



**ನವದೆಹಲಿ: ಮಹಾರಾಷ್ಟ್ರ ರಾಜಕೀಯದಲ್ಲಿ ಮತ್ತೊಮ್ಮೆ ದೊಡ್ಡ ಮಟ್ಟದ ರಾಜಕೀಯ ಪುನರ್‌ಜೋಡಣೆ ನಡೆಯುವ ಮುನ್ಸೂಚನೆಗಳು ಗೋಚರಿಸುತ್ತಿವೆ. ಶರದ್ ಪವಾರ್ ನೇತೃತ್ವದ ರಾಷ್ಟ್ರೀಯತಾವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ–ಎಸ್‌ಪಿ) ಎನ್‌ಡಿಎ ಮೈತ್ರಿಕೂಟದೊಂದಿಗೆ ಕೈಜೋಡಿಸಬಹುದು ಎಂಬ ಊಹಾಪೋಹಗಳು ದಿನದಿಂದ ದಿನಕ್ಕೆ ಬಲಗೊಳ್ಳುತ್ತಿವೆ.**

ಇದಕ್ಕೆ ಪುಷ್ಟಿ ನೀಡುವಂತೆ, ಎನ್‌ಸಿಪಿ (ಎಸ್‌ಪಿ) ಕಾರ್ಯಾಧ್ಯಕ್ಷೆ ಸುಪ್ರಿಯಾ ಸುಳೆ ಮತ್ತು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರು ದೆಹಲಿಯಲ್ಲಿ ಒಂದೇ ಕಾರಿನಲ್ಲಿ ಪ್ರಯಾಣಿಸಿರುವುದು ಕಂಡುಬಂದಿದೆ. ಸಂಸತ್ತಿನ ಆವರಣದಲ್ಲಿ ಇಬ್ಬರು ನಾಯಕರು ಸೌಹಾರ್ದಯುತವಾಗಿ ಚರ್ಚಿಸಿ, ಬಳಿಕ ಒಂದೇ ವಾಹನದಲ್ಲಿ ನಿರ್ಗಮಿಸಿರುವ ದೃಶ್ಯಗಳು ರಾಜಕೀಯ ವಲಯದಲ್ಲಿ ತೀವ್ರ ಸಂಚಲನ ಮೂಡಿಸಿವೆ. ಈ ಬೆಳವಣಿಗೆಯು ಕೇವಲ ಕಾಕತಾಳೀಯವೇ ಅಥವಾ ಮಹಾರಾಷ್ಟ್ರ ರಾಜಕೀಯದಲ್ಲಿ ಮತ್ತೊಂದು ದೊಡ್ಡ ಕ್ರಾಂತಿಗೆ ವೇದಿಕೆ ಸಿದ್ಧವಾಗುತ್ತಿದೆಯೇ ಎಂಬ ಚರ್ಚೆಗಳು ಜೋರಾಗಿವೆ.

ಇತ್ತೀಚೆಗಷ್ಟೇ ಎನ್‌ಸಿಪಿ (ಎಸ್‌ಪಿ)ಯ ಎಂಟು ಲೋಕಸಭಾ ಸದಸ್ಯರು ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿ ಮಾಡಿದ್ದರು. ರೈಲ್ವೆ ಯೋಜನೆಗಳು (ಪುಣೆ–ನಾಸಿಕ್ ಸೆಮಿ–ಹೈಸ್ಪೀಡ್ ರೈಲು) ಹಾಗೂ ರೈತರ ಸಮಸ್ಯೆಗಳ ಕುರಿತು ಚರ್ಚಿಸಲು ಈ ಭೇಟಿ ನಡೆಸಲಾಗಿದೆ ಎಂದು ಪಕ್ಷ ಸ್ಪಷ್ಟಪಡಿಸಿದ್ದರೂ, ಇದರ ಹಿಂದೆ ರಾಜಕೀಯ ಲೆಕ್ಕಾಚಾರಗಳಿವೆ ಎನ್ನಲಾಗಿದೆ. ದೆಹಲಿಯಲ್ಲಿ ನಡೆದ ಸುಪ್ರಿಯಾ ಸುಳೆ ಅವರ ಪುತ್ರಿ ರೇವತಿಯ ವಿವಾಹ ಆರತಕ್ಷತೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಿದ್ದು ಈ ಊಹಾಪೋಹಗಳಿಗೆ ಮತ್ತಷ್ಟು ಬಲ ತುಂಬಿದೆ.

ಮೂಲಗಳ ಪ್ರಕಾರ, ಎನ್‌ಸಿಪಿ (ಎಸ್‌ಪಿ) ಎನ್‌ಡಿಎ ಸೇರಲು ಎರಡು ಮಾರ್ಗಗಳನ್ನು ಪರಿಗಣಿಸಲಾಗುತ್ತಿದೆ. ಪ್ರತ್ಯೇಕ ಪಕ್ಷವಾಗಿ ಮೈತ್ರಿ ಸೇರುವುದು ಅಥವಾ ಸುನೇತ್ರಾ ಪವಾರ್ ನೇತೃತ್ವದ ಎನ್‌ಸಿಪಿ ಬಣದೊಂದಿಗೆ ವಿಲೀನಗೊಂಡು ಎನ್‌ಡಿಎ ಪ್ರವೇಶಿಸುವುದು ಎಂಬ ಚರ್ಚೆಗಳು ರಾಜಕೀಯ ಕಾರಿಡಾರ್‌ನಲ್ಲಿ ಕೇಳಿಬರುತ್ತಿವೆ.

ಪಕ್ಷದ ಅಧಿಕೃತ ನಿಲುವು: ಆಡಳಿತಾರೂಢ ಮೈತ್ರಿಕೂಟಕ್ಕೆ ಸೇರುವ ಕುರಿತು ಹಬ್ಬಿರುವ ವರದಿಗಳನ್ನು ಪಕ್ಷದ ಮುಖಂಡರು ಈಗಾಗಲೇ ತಳ್ಳಿಹಾಕಿದ್ದಾರೆ. ಆದರೆ, ಮುಂಬರುವ ದಿನಗಳಲ್ಲಿ ಜನರ ಹಿತಾಸಕ್ತಿ ಹಾಗೂ ಮಹಾರಾಷ್ಟ್ರದ ಅಭಿವೃದ್ಧಿ ದೃಷ್ಟಿಯಿಂದ ಕೆಲವು ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ವಿಶೇಷವಾಗಿ, ಕೇಂದ್ರ ಸರ್ಕಾರದ ಡಿಲಿಮಿಟೇಶನ್ (ಸೀಮಾ ನಿರ್ಣಯ) ಮಸೂದೆಯು ಎಲ್ಲಾ ರಾಜ್ಯಗಳ ಹಿತಾಸಕ್ತಿ ಕಾಯ್ದುಕೊಂಡರೆ ಅದನ್ನು ಬೆಂಬಲಿಸುವ ಬಗ್ಗೆಯೂ ಪಕ್ಷವು ಹಿಂದೆ ಸುಳಿವು ನೀಡಿತ್ತು.

ಮಹಾರಾಷ್ಟ್ರದಲ್ಲಿ ಈಗಾಗಲೇ ಹಲವು ರಾಜಕೀಯ ಬದಲಾವಣೆಗಳನ್ನು ಕಂಡಿರುವ ಜನಸಾಮಾನ್ಯರು, ಈ ನೂತನ ಬೆಳವಣಿಗೆಗಳು ರಾಜ್ಯದ ರಾಜಕೀಯ ಚಿತ್ರಣವನ್ನು ಹೇಗೆ ಬದಲಾಯಿಸಲಿವೆ ಎಂಬುದನ್ನು ಕುತೂಹಲದಿಂದ ಗಮನಿಸುತ್ತಿದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101